ಸಂಪುಟ 01 | ಸಂಚಿಕೆ 239 ಮಂಗಳವಾರ 03 ನವೆಂಬರ್ 2026 | ಪುಟ 4 | ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

ಸ್ಯಾಂಡ್‌ವಿಚ್ ದಿನ (World Sandwich Day): ಸ್ಯಾಂಡ್‌ವಿಚ್ ಕಂಡುಹಿಡಿದರೆಂದು ನಂಬಲಾದ ಜಾನ್ ಮೊಂಟಾಗು ಅವರ ನೆನಪಿಗಾಗಿ ಪ್ರತಿ ವರ್ಷ ನವೆಂಬರ್ 3 ರಂದು ಈ ದಿನವನ್ನು ಆಚರಿಸಲಾಗುತ್ತದೆ.

2) ಜೈವಿಕ ವೈವಿಧ್ಯ ಮೀಸಲು ಪ್ರದೇಶಗಳ ಅಂತರರಾಷ್ಟ್ರೀಯ ದಿನ (International Day for Biosphere Reserves): ಪ್ರಕೃತಿ ಮತ್ತು ಮಾನವನ ನಡುವಿನ ಸುಸ್ಥಿರ ಬಾಂಧವ್ಯವನ್ನು ಉತ್ತೇಜಿಸಲು ಯುನೆಸ್ಕೋ (UNESCO) ಈ ದಿನವನ್ನು ಆಚರಿಸುತ್ತದೆ.

3)ಸಂಸ್ಕೃತಿ ದಿನ (ಜಪಾನ್): ಜಪಾನ್‌ನಲ್ಲಿ ಈ ದಿನವನ್ನು ಕಲೆ, ಸಂಸ್ಕೃತಿ ಮತ್ತು ಶೈಕ್ಷಣಿಕ ಸಾಧನೆಗಳನ್ನು ಗೌರವಿಸುವ 'ಸಂಸ್ಕೃತಿ ದಿನ' (Culture Day) ಎಂದು ರಾಷ್ಟ್ರೀಯ ರಜಾದಿನವಾಗಿ ಆಚರಿಸಲಾಗುತ್ತದೆ.

## ಸುಭಾಷಿತ

"ಬದುಕಿನಲ್ಲಿ ಬರುವ ಕಷ್ಟಗಳು ನಿನ್ನನ್ನು ಮುರಿಯಲು ಅಲ್ಲ, ಬದಲಿಗೆ ನಿನ್ನ ಶಕ್ತಿಯನ್ನು ಅರಿಯಲು."

ರವೀಂದ್ರನಾಥ ಟ್ಯಾಗೋರ್

# 72 ಸಾವಿರ ಸರ್ಕಾರಿ ಹುದ್ದೆಗಳ ಭರ್ತಿಗೆ ಸರ್ಕಾರದ ಆದೇಶ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಪಂಚಾಯ್ತಿ ಮಟ್ಟದ ಸರ್ಕಾರಿ ಶಾಲೆಗಳನ್ನು ನಗರ ಪ್ರದೇಶದ ಶಾಲೆಗಳಂತೆ ರೂಪಿಸಲಾಗುತ್ತಿದೆ. ಈಗಾಗಲೇ 15 ಸಾವಿರ ಶಾಲಾ ಶಿಕ್ಷಕರ ನೇಮಕಾತಿಗೆ ಆದೇಶ ನೀಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.** ನಕ್ಷೆಗಳನ್ನುನೋಡಿ

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದಲ್ಲಿ 25,498 ದ್ವಿಭಾಷಾ ಶಾಲೆಗಳು ಆರಂಭವಾಗಿದೆ. 250 ಸರ್ಕಾರಿ ಶಾಲೆಗಳನ್ನು ವಿಜ್ಞಾನ ಪ್ರಯೋಗಾಲಯ ಸ್ಥಾಪನೆ ಮಾಡಲಾಗಿದೆ. 6ನೇ ತರಗತಿಯಿಂದ ಕೌಶಲ್ಯ ಆಧಆರಿತ ಶಿಕ್ಷಣ ಆರಂಭಿಸಿದ್ದೇವೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ 1-10ನೇ ತರಗತಿ, ಪಿಯು ವಿದ್ಯಾರ್ಥಿಗಳಿಗೆ



ವೃತ್ತಿಪರ ಶಿಕ್ಷಣದಲ್ಲಿ ವ್ಯಾಸಂಗಕ್ಕೆ ಶೇ.7ರಷ್ಟು ಮೀಸಲಾತಿ ನೀಡಲಾಗಿದೆ ಎಂದರು.

ನಮ್ಮ ಮಕ್ಕಳು ಏಷ್ಯನ್ ಗೇಮ್ಸ್‌ನಲ್ಲಿ 8 ಪದಕ ಗೆದ್ದಿದ್ದಾರೆ. ನಮ್ಮ ಸರ್ಕಾರ ಚಿನ್ನದ ಪದಕ ವಿಜೇತರಿಗೆ 1 ಕೋಟಿ, ಬೆಳ್ಳಿ ಗೆದ್ದವರಿಗೆ 75 ಲಕ್ಷ, ಕಂಚು ಗೆದ್ದವ-ರಿಗೆ 50 ಲಕ್ಷ ನಗದು ಬಹುಮಾನ ನೀಡಿ ಪ್ರೋತ್ಸಾಹ ನೀಡಿದೆ.ಏಷ್ಯನ್ ಗೇಮ್ಸ್ ನಲ್ಲಿ ಭಾಗವಹಿಸಿದ 20 ಕ್ರೀಡಾಪಟುಗಳಿಗೆ ತಲಾ 5 ಲಕ್ಷ ನೀಡಲಾಗಿದೆ. ಪ್ಯಾರಾಲಿಂಪಿಕ್ಸ್ ಗೆ ತಯಾರಾಗುತ್ತಿರುವ ಕ್ರೀಡಾಪಟುಗಳ ಸಿದ್ಧತೆಗೆ ತಲಾ 10 ಲಕ್ಷ ನೀಡಲಾಗುತ್ತಿದೆ ಎಂದರು. ಕರ್ನಾಟಕ ಪ್ರಾದೇಶಿಕ ಯೋಜನೆ ರೂಪಿಸಿ 2047ರ ವೇಳೆಗೆ ರಾಜ್ಯಕ್ಕೆ ಹೊಸ ರೂಪ ನೀಡಲು ಹೆಜ್ಜೆ ಹಾಕುತ್ತಿದ್ದೇವೆ. ಇದರಿಂದ ಮುಂದಿನ 20 ವರ್ಷಗಳಲ್ಲಿ 5 ಲಕ್ಷ ಕೋಟಿ ಹೂಡಿಕೆಗೆ ಕಾರ್ಯಕ್ರಮ ರೂಪಿಸಲಾಗಿದೆ. ಈಗಾಗಲೇ 72 ಸಾವಿರ ಸರ್ಕಾರಿ ಹುದ್ದೆಗಳ ಭರ್ತಿಗೆ ಆದೇಶ ಮಾಡಲಾಗಿದ್ದು, 66 ಸಾವಿರ ಉದ್ಯೋಗಗಳನ್ನು ಸೃಷ್ಟಿ ಮಾಡಲಾಗಿದೆ ಎಂದರು. ನಕ್ಷೆಗಳನ್ನುನೋಡಿ

ಮುಖ್ಯಮಂತ್ರಿ ರಸ್ತೆ ಸಂಪರ್ಕ ಯೋಜನೆಗೆ 10 ಸಾವಿರ ಕೋಟಿ ನೀಡಿದ್ದು, 20 ಸಾವಿರ ಕಿ.ಮೀ ಜಿಲ್ಲಾ ಹಾಗೂ ತಾಲೂಕು ಪಂಚಾಯ್ತಿ ರಸ್ತೆಗಳ ಅಭಿವೃದ್ಧಿಗೆ ಪ್ರತಿ ಪಂಚಾಯ್ತಿಗೆ 6 ಸಾವಿರ ಕೋಟಿ ಹಣ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 100 ಹೊಸ ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆಗೊಳಿಸಲಾಗುವುದು. ಎಲ್ಲರ ಆಸ್ತಿ ದಾಖಲೆಗಳ ಮೂಲಕ ಮಾಲೀಕತ್ವ ಗಟ್ಟಿಗೊಳಿಸಲು ಭೂಗ್ಯಾರಂಟಿ ಜಾರಿಗೆ ತಂದಿದೆ. ರೈತರಿಗಾಗಿ ತೇಗದ ಸಿರಿ ಯೋಜನೆ ರೂಪಿಸಿದೆ.ರಾಜ್ಯದಲ್ಲಿ 5 ಲಕ್ಷ ನಿವೇಶನಗಳನ್ನು ವಿತರಣೆ ಮಾಡಲು ಕಾರ್ಯಕ್ರಮ ನೀಡಲಾಗಿದೆ ಎಂದು ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಲಕ್ಷಾಂತರ ಜನರ ಮತಗಳನ್ನು ವ್ಯವಸ್ಥಿತವಾಗಿ ಅಳಿಸಿಹಾಕಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಕ್ಷಾಂತರ ಮತದಾರರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಮತದಾರರ ಹೆಸರನ್ನು ಮತ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಈ ಅನ್ಯಾಯದ ವಿರುದ್ಧ ನಮ್ಮ ಹೋರಾಟ ಮುಂದುವ-ರಿಯಲಿದೆ ಎಂದು ಸಿಎಂ ಹೇಳಿದರು

## ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ದೆಹಲಿಯಲ್ಲಿ ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಕೇಂದ್ರ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಭೇಟಿ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ ನವಂಬರ್ 2ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ದೆಹಲಿಯಲ್ಲಿ ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ಕೇಂದ್ರ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ, ಸುಮಾರು ಹೊತ್ತುಗಳ ಕಾಲ ಮಾತುಕತೆ ನಡೆಸಿ ಸಮಾಲೋಚನೆ ನಡೆಸಿದರು.**

ಬೇಟಿ ಬಳಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಪಕ್ಷ ಸಂಘಟನೆ ಮತ್ತು ಇಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಮತ್ತು ತಮ್ಮ ಮೇಲೆ ಬಂದಿರುವ ಸ್ಟಿಂಗ ಆಪರೇಷನ್ ವಿಚಾರವನ್ನು ಅವರ ಗಮನಕ್ಕೆ ತರುವ ಮೂಲಕ ತಮ್ಮ



ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗಿದೆ ಈ ಭೇಟಿ ವೇಳೆಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಗರಾಭಿವೃದ್ಧಿ ಸಚಿವ ಡಾ ಎಸ್.ಯತೀಂದ್ರ ಸಿದ್ದರಾಮಯ್ಯ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎ.ಎಸ್. ಪೊನ್ನಣ್ಣ, ಮಾಜಿ ಸಚಿವರಾದ ವೆಂಕಟೇಶ್, ವಿಧಾನ ಪರಿಷತ್ ಸದಸ್ಯರಾದ ನಾಗರಾಜ್ ಯಾದವ್, ಡಾ ಡಿ ತಿಮ್ಮಯ್ಯ, ಹಿರಿಯ ಪತ್ರಕರ್ತರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಕೆ ಶಿವಕುಮಾರ್, ಮಾಜಿ ಸದಸ್ಯ ರಮೇಶ್ ಬಾಬು, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮೆಹರೋಜ್ ಖಾನ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾಧ್ಯಮ ಸಲಹೆಗಾರ ಕೆ ವಿ ಪ್ರಭಾಕರ್ ರವರು ಸೇರದಂತೆ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

## ಸ್ವಯಂ ಸೇವಕ ಸಂಘದಿಂದ ಪಥ ಸಂಚಲನ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದಲ್ಲಿ ವಿಜಯ ದಶಮಿ ಅಂಗವಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಹಾಗೂ ಬಿಜೆಪಿ ಕಾರ್ಯಕರ್ತ-ರಿಂದ ಗಣ ವೇಷ ಧರಿಸಿ ಪಥ ಸಂಚಲನ ನಡೆಸಿದರು. ಈಶ್ವರ



ದೇವಸ್ಥಾನದಿಂದ ಪ್ರಾರಂಭ ಗೂಂಡ ಪಥ ಸಂಚಲನ ಬಾಜಾ ಭಜಂತ್ರಿಯೊಂದಿಗೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಹಲವರು ರಂಗೋಲಿ ಹಾಗೂ ಪುಷ್ಪಗಳಿಂದ ಪಥ ಸಂಚಲನಕ್ಕೆ ಸ್ವಾಗತ ಮಾಡಿದರು. ಈ ವೇಳೆ ಆರ್‌ಎಸ್‌ಎಸ್ ಕಾರ್ಯಕರ್ತರಾದ ಪಾಂಡುರಂಗ ಆಪ್ಟೆ ಸೋಮ ಶೇಖರ ನಾಯಕ, ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಮುಖಂಡರಾದ, ಅನಂತ ದಾಸ, ಆರ್‌ಎಸ್‌ಎಸ್ ಮುಖಂಡರು , ಹಟ್ಟಿ ಹಾಗೂ ಮುದ್ಗಲ್ ಕಾರ್ಯಕರ್ತರು ಇದ್ದರು .

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.


## ಚೆನ್ನೈನಲ್ಲಿ ನಡೆದ 41ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಅಮೋಘ ಸಾಧನೆ

# ಸಿಂಧನೂರಿನ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಎತ್ತಿಹಿಡಿದ ವಿಜಯಲಕ್ಷ್ಮಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತನ್ನಲ್ಲಿರುವ ಅಪಾರ ಪ್ರತಿಭೆ, ಕಠಿಣ ಪರಿಶ್ರಮ, ನಿರಂತರ ಅಭ್ಯಾಸ ಹಾಗೂ ಅಚಲ ಆತ್ಮವಿಶ್ವಾಸದ ಮೂಲಕ ಕ್ರೀಡಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಸಿಂಧನೂ-ರಿನ ಹೆಮ್ಮೆಯ ಕ್ರೀಡಾಪಟು ವಿಜಯಲಕ್ಷ್ಮಿ ಅವರು ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡುವ ಮೂಲಕ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.**

ತಮಿಳುನಾಡಿನ ಚೆನ್ನೈನಲ್ಲಿ ನಡೆದ 41ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಬಾಲಕಿಯರ ಪೆಂಟಾಥ್ಲಾನ್ ಸ್ಪರ್ಧೆಯಲ್ಲಿ ವಿಜಯಲಕ್ಷ್ಮಿ ಅವರು ನೂತನ ಕೂಟ ದಾಖಲೆಯನ್ನು ನಿರ್ಮಿಸುವ ಮೂಲಕ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಪ್ರತಿಭಾವಂತ ಕ್ರೀಡಾಪಟುಗಳ ನಡುವೆ ತಮ್ಮ ಅದ್ಭುತ ಸಾಮಥ-ರ್ಯವನ್ನು ಪ್ರದರ್ಶಿಸಿ ಪ್ರಥಮ ಸ್ಥಾನ ಗಳಿಸಿರುವುದು ಸಿಂಧನೂರು ತಾಲ್ಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ.



ಪೆಂಟಾಥ್ಲಾನ್ ಸ್ಪರ್ಧೆಯು ಕ್ರೀಡಾಪಟುವಿನ ವೇಗ, ಶಕ್ತಿ, ಸಹನಶಕ್ತಿ, ದೈಹಿಕ ಸಾಮರ್ಥ್ಯ, ಸಮನ್ವಯ ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಏಕಕಾಲದಲ್ಲಿ ಪರೀಕ್ಷಿಸುವ ಅತ್ಯಂತ ಸವಾಲಿನ ಸ್ಪರ್ಧೆಯಾಗಿದೆ. ಇಂತಹ ಕಠಿಣ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ನೂತನ ಕೂಟ ದಾಖಲೆಯನ್ನು ಸ್ಥಾಪಿಸಿರುವ ವಿಜಯಲಕ್ಷ್ಮಿ ಅವರ ಸಾಧನೆ ನಿಜಕ್ಕೂ ಶ್ಲಾಘನೀಯವಾಗಿದೆ.

ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವುದಷ್ಟೇ ಅಲ್ಲದೆ, ಹಿಂದಿನ ಕೂಟ ದಾಖಲೆಯನ್ನು ಹಿಂದಿಕ್ಕಿ ಹೊಸ ದಾಖಲೆ ನಿರ್ಮಿಸಿರುವುದು ಅವರ ಕ್ರೀಡಾ ಜೀವನದ ಮಹತ್ವದ ಮೈಲಿಗಲ್ಲಾಗಿದೆ. ಈ ಸಾಧನೆಯ ಹಿಂದೆ ಅವರ ಸತತ ಪರಿಶ್ರಮ, ಶಿಸ್ತುಬದ್ಧ ತರಬೇತಿ, ಸಮಯಪಾಲನೆ, ಕ್ರೀಡೆಯ ಮೇಲಿನ ಅಪಾರ ಆಸಕ್ತಿ ಹಾಗೂ ಗುರಿ ಸಾಧಿಸುವ ಛಲ ಅಡಗಿದೆ.

ಗ್ರಾಮೀಣ ಭಾಗದ ಪ್ರತಿಭೆಗಳು ಸೂಕ್ತ ಅವಕಾಶ, ಪ್ರೋತ್ಸಾಹ ಮತ್ತು ಮಾರ್ಗದರ್ಶನ ದೊರೆತರೆ ರಾಷ್ಟ್ರಮಟ್ಟದಲ್ಲಿಯೂ ಅದ್ಭುತ ಸಾಧನೆ ಮಾಡಬಲ್ಲರು ಎಂಬುದಕ್ಕೆ ವಿಜಯಲಕ್ಷ್ಮಿ ಅವರ ಸಾಧನೆ ಸಾಕ್ಷಿಯಾಗಿದೆ. ವಿಶೇಷವಾಗಿ ಹೆಣ್ಣುಮಕ್ಕಳು ಕ್ರೀಡಾ ಕ್ಷೇತ್ರದಲ್ಲಿ ಮುನ್ನಡೆಯಲು ಇಂತಹ ಸಾಧನೆಗಳು ಹೆಚ್ಚಿನ ಸ್ಫೂರ್ತಿ ನೀಡುತ್ತವೆ. ಅವರ ಈ ಗೆಲುವು ಸಿಂಧನೂರು ಭಾಗದ ಯುವ ಕ್ರೀಡಾಪಟುಗಳಿಗೆ ಹೊಸ ಹುಮ್ಮಸ್ಸು ಮತ್ತು ಆತ್ಮವಿಶ್ವಾಸವನ್ನು ತುಂಬಿದೆ.

ವಿಜಯಲಕ್ಷ್ಮಿ ಅವರ ಈ ಅಭೂತಪೂರ್ವ ಸಾಧನೆಗೆ ಕ್ರೀಡಾಭಿಮಾನಿಗಳು, ಸಾರ್ವಜನಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಗಣ್ಯರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಾಧನೆಗಳನ್ನು ಮುಂದುವರಿಸಿ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಪದಕಗಳನ್ನು ಗೆದ್ದು ಭಾರತದ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಗಿಸಲಿ ಎಂದು ಶುಭ ಹಾರೈಸಿದ್ದಾರೆ.

ನೂತನ ದಾಖಲೆ, ಚಿನ್ನದ ಪದಕದೊಂದಿಗೆ ಸಿಂಧನೂರಿನ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಮೊಳಗಿಸಿದ ವಿಜಯಲಕ್ಷ್ಮಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಅವರ ಕ್ರೀಡಾ ಪಯಣಕ್ಕೆ ಇನ್ನಷ್ಟು ಯಶಸ್ಸು ಮತ್ತು ಉಜ್ವಲ ಭವಿಷ್ಯ ಲಭಿಸಲಿ ಎಂಬುದು ಸಮಸ್ತ ಸಿಂಧನೂರು ಜನತೆಯ ಆಶಯವಾಗಿದೆ.

## ಸಮಯಕ್ಕೆ ಸರಿಯಾಗಿ ಬಾರದ ಬಸ್‌ಗಳು: ಎಚ್. ವೀರಾಪುರದಲ್ಲಿ ವಿದ್ಯಾರ್ಥಿಗಳ ತೀವ್ರ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಕುರುಗೋಡು: ತಾಲೂಕಿನ ಸಮೀಪದ ಎಚ್. ವೀರಾಪುರ ಗ್ರಾಮದಲ್ಲಿ ಇಂದು ಮುಂಜಾನೆ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಮದ ಮುಖಂಡರು ಸೇರಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ತಡೆದು ತೀವ್ರ ಪ್ರತಿಭಟನೆ ನಡೆಸಿದರು.**

ಪ್ರತಿದಿನ ಬಸ್‌ಗಳು ನಿಗದಿತ ಸಮಯಕ್ಕೆ ಬಾರದೆ ತಡವಾಗಿ ಬರುತ್ತಿರುವುದರಿಂದ ತರಗತಿಗಳಿಗೆ ಸಕಾಲದಲ್ಲಿ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ವಿದ್ಯಾರ್ಥಿಗಳು, ಸಾರಿಗೆ ಸಂಸ್ಥೆಯ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. "ನಾವು ಕಾಲೇಜಿಗೆ ಹೋಗಿ ಕ್ಲಾಸ್ ಅಟೆಂಡ್ ಆಗುವುದು ಯಾವಾಗ? ಪ್ರತಿನಿತ್ಯ ಇದೇ ಕಥೆಯಾದರೆ ನಮ್ಮ ವಿದ್ಯಾಭ್ಯಾಸದ ಗತಿಯೇನು?" ಎಂದು ವಿದ್ಯಾರ್ಥಿಗಳು ತೀವ್ರವಾಗಿ ಪ್ರಶ್ನಿಸಿದರು. ಪ್ರತಿಭಟನಾ ನಿರತ ವಿದ್ಯಾರ್ಥಿಗಳಿಗೆ ಸಾಥ್ ನೀಡಿದ ಗ್ರಾಮದ ಮುಖಂಡರು,





ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿರುವ ಸಾರಿಗೆ ಇಲಾಖೆಯ ಉದಾಸೀನತೆಯನ್ನು ಖಂಡಿಸಿದರು.

ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಬಂದು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಮತ್ತು ಗ್ರಾಮೀಣ ಭಾಗಕ್ಕೆ ಸಕಾಲದಲ್ಲಿ ಬಸ್ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಸಮಸ್ತ ವಿದ್ಯಾರ್ಥಿ ಬಳಗದವರು ಪಾಲ್ಗೊಂಡಿದ್ದರು. ಪ್ರತಿಭಟನಾ ಸ್ಥಳದಲ್ಲಿದ್ದ ಕಾಲೇಜ್ ವಿದ್ಯಾರ್ಥಿ ವಿಜಯಕುಮಾರ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸಾರಿಗೆ ಸಂಸ್ಥೆಯು ಕೂಡಲೇ ಎಚ್ಚೆತ್ತುಕೊಂಡು ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

## ಕವಿತಾಳ ಪಟ್ಟಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ; ಕನ್ನಡ ಅಭಿಮಾನಿ ಬಳಗದಿಂದ ಇಂದು ಪಟ್ಟಣದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರವನ್ನು ಮೆರವಣಿಗೆ ಮಾಡುವ ಮೂಲಕ ಅತ್ಯಂತ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.**

ಬೆಟ್ಟದ ಅಮರೇಶ್ವರ ದೇವಸ್ಥಾನಿಂದ ಸಾಗಿದ ಮೆರವಣಿಗೆಗೆ ಕಲ್ಮಠದ ಶ್ರೀ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು ಮತ್ತು ಜಡೆ ಕರಿಯಪ್ಪತಾತ ಅವರು ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಮುಖ್ಯ ರಸ್ತೆಯ ಮೂಲಕ ಆಗಮಿಸಿದ ಮೆರವಣಿಗೆ ಸಂತೆ ಬಾಜಾರ್ ,ದೈವದಕಟ್ಟೆ ಮಾರ್ಗದ ಮೂಲಕ ಆನ್ವರಿ ರಸ್ತೆಗೆ ಆಗಮಿಸಿ ಪುನಃ ಕನಕನಗರಕ್ಕೆ ಬಂದು ತಲುಪಿತು. ಮೆರವಣಿಗೆಯಾದ್ಯಂತ ಕನ್ನಡ ಗೀತೆಗಳಿಗೆ ಯುವಕರು ಹೆಜ್ಜೆ ಹಾಕುವ ಮೂಲಕ ಮೆರಗು ನೀಡಿದರು. ಒಟ್ಟಾರೆಯಾಗಿ ಕನ್ನಡರಾಜ್ಯೋತ್ಸವವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪುನವೃಥ್ಥಾನ ದೇವಾಲಯದ



ಫಾದರ್ ಆಕಾಶ್, ಪಿಎಸ್ಐ ಅಜ್ಮೀರ್ ಪಾಷಾ,ತ್ರಿಯಂಭಕೇಶ್ವರ ದೇವಸ್ಥಾನದ ಅರ್ಚಕ ಸಿದ್ದಯ್ಯಸ್ವಾಮಿ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕಿರಿಲಿಂಗಪ್ಪ, ಯಮನಪ್ಪ ದಿನ್ನಿ, ಮಲ್ಲಿಕಾರ್ಜುನ ಗೌಡ, ಗಂಗಪ್ಪ ದಿನ್ನಿ, ಪ್ರಥಮ ದರ್ಜೆ ಗುತ್ತೆದಾರ ನಿಂಗಪ್ಪ ದಿನ್ನಿ ಹಾಗೂ ಕ್ನನಡ ಅಭಿಮಾನಿ ಬಳಗದ ಸಮಾನ ಮನಸ್ಕ ಯುವಕರು ಉಪಸ್ಥಿತರಿದ್ದರು.

ವಿವಿಧಡೆ

ಕನ್ನಡಾಂಬೆ ಭಾವಚಿತ್ರಕ್ಕೆ ಪೂಜೆ ಪಟ್ಟಣದ ನಾಡಕಾರ್ಯಾಲಯದಲ್ಲಿ ಕನ್ನಡಾಂಬೆಯ ಭಾವಚಿತ್ರಕ್ಕೆ ಉಪ ತಹಸೀಲ್ದಾರ್ ಮಂಜುನಾಥ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು, ಕಂದಾಯ ನಿರೀಕ್ಷಕ ವಿಜಯಕುಮಾರ, ಗ್ರಾಮ ಆಡಳಿತಾಧಿಕಾರಿಗಳಾದ ಸದಾಕಲಿ ಹರಕೇರಿ, ಚಾಮುಂಡೇಶ್ವರಿ, ವಿಜಯಲಕ್ಷ್ಮಿ, ಹಾಗೂ ಸಿಬ್ಬಂದಿಗಳಾದ ನೌಶಾದ್, ಮೌನೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಟ್ಟಣ ಪಂಚಾಯತಿ, ಪೊಲೀಸ್ ಠಾಣೆ, ಸಮುದಾಯ ಆರೋಗ್ಯ ಕೇಂದ್ರ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಕರ್ನಾಟಕ ಪಬ್ಲಿಕ್ ಪ್ರೌಢಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಕನ್ಯಾ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಖಾಸಗಿ ಶಾಲೆಗಳಾದ ಮಾಡಲ್ ಹಿರಿಯ ಪ್ರಾಥಮಿಕ ಶಾಲೆ, ಏಮ್ ಪೂರ್ವ ಪ್ರಾಥಮಿಕ ಮತ್ತು ಪ್ರಾರ್ಥಮಿಕ ಶಾಲೆ, ವಾಸವಿ ವಿದ್ಯಾವಿಕಾಸ ಆಂಗ್ಲ ಮಾದ್ಯಮ ಶಾಲೆ ಸೇರಿದಂತೆ ವಿವಿಧ ಖಾಸಗಿ ಶಿಕ್ಷಣ ಮತ್ತು ವಿವಿಧ ಸಹಕಾರಿ ಸಂಘ ಸಂಸ್ಥೆಗಳಲ್ಲಿ ಕನ್ನಡಾಂಬೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

## ಸಾಹಿತ್ಯ ಸಿಂಚನ

### ನವ ಕರ್ನಾಟಕ ಉದಯೋತ್ಸವ

ಕನ್ನಡಿಗರ ಹೃದಯಗಳು ಒಂದಾದ ಈ ಸಮಯ ।
ಸಿರಿಗನ್ನಡದ ಚೆಲುವಿನಲ್ಲಿ ಆಯಿತು ನವ ಕರ್ನಾಟಕದ ಉದಯ ॥

ಕೆಚ್ಚೆದೆಯ ಕನ್ನಡಿಗರ ರಕ್ತದಲಿ ಸ್ವಾಭಿಮಾನವು ಉಕ್ಕಿ ಹ-ರಿಯಿತು ।
ಹೋರಾಟಗಾರರ ಮನದಲಿ ಶುಭ ಪ್ರೇಮದ ಹೊಳೆಯು ಹರಿಯಿತು ॥

ಹಳದಿ ಕುಂಕುಮದ ಬಣ್ಣವು ಬೆಳಗಿತು ಕನ್ನಡದ ಕೀರ್ತಿ ।
ಕಾವೇರಿಯಿಂದ ಕೃಷ್ಣೆಯ ತನಕ ಮಾರ್ದನಿಸಿತು ಜಯಘೋಷದ ಕೀರ್ತಿ ॥

ಹೆಚ್ಚಿತು ಏಕೀಕರಣದ ಕಾವು ನಾಡು-ನುಡಿಯ ಅಭಿಮಾನಿಗಳಲ್ಲಿ ।
ಹರಿದು ಹಂಚಿಹೋಗಿದ್ದ ಪ್ರಾಂತಗಳು ಒಂದಾದವು ಕರ್ನಾಟಕದಲ್ಲಿ ॥

ದಶ ದಿಕ್ಕುಗಳಿಂದ ಹರಿದುಬಂದ ಕನ್ನಡದ ಪ್ರೀತಿಯ ಮಹಾಪೂರ ।
ನವೆಂಬರ್ ಒಂದರ ಈ ಸುದಿನದಲಿ ಕಾಣಿಸಿತು ನವ ನಾಡಿನ ಶೃಂಗಾರ ॥

ಕನ್ನಡ ತಾಯಿಯ ಮಡಿಲಲ್ಲಿದೆ ಎಲ್ಲರೂ ಒಂದೇ ಎಂಬ ಭಾವ ।
ಜಾತಿ ಮತಗಳ ಭೇದವಿಲ್ಲದೆ ತೋರಿಸೋಣ ಜಗಕೆ ಪ್ರೀತಿಯ ಭಾವ ॥

ಕನ್ನಡಿಗರೆಲ್ಲರೂ ಒಂದಾಗಿ ಕಟ್ಟೋಣ ಸುಂದರ ನಾಡನ್ನು ।
ಮುಂದಿನ ಪೀಳಿಗೆಗೆ ಮಾದರಿಯಾಗಿ ಉಳಿಸೋಣ ತಾಯ್ನಾಡನ್ನು ॥

ಕೈ-ಕೈ ಹಿಡಿದು ನಾವೆಲ್ಲರೂ ನಡೆವೆಯೋಣ ಒಗ್ಗಟ್ಟಿನ ಹಾದಿಯಲ್ಲಿ ।
ಕರುನಾಡ ಧ್ವಜವು ಹಾರಲಿ ಗಗನದಿ ಬೆಳಗಲಿ ಶಾಂತಿಯ ಬೆಳಕು ಇಲ್ಲಿ ॥

ಡಾ ಮಹೇಂದ್ರ ಕುರ್ಡಿ

## ಖೋ-ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ಎಚ್.ಎಸ್. ಪಾಟೀಲ ದೈಹಿಕ ಶಿಕ್ಷಣ ಮಹಾವಿದ್ಯಾಲಯ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಶ್ರೀ ಎಸ್.ಎಸ್. ವಿದ್ಯಾಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಚ್.ಎಸ್. ಪಾಟೀಲ ದೈಹಿಕ ಶಿಕ್ಷಣ ಮಹಾವಿದ್ಯಾಲಯವು 2026?27ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಅಂತರ್ ಕಾಲೇಜು ಮಟ್ಟದ ಖೋ-ಖೋ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದು ಮಹಾವಿದ್ಯಾಲಯಕ್ಕೆ ಗೌರವ ತಂದಿದೆ.**



ಸವದತ್ತಿಯ ಶ್ರೀ ಎಸ್.ವಿ.ಎಸ್. ಬೆಳ್ಳುಬ್ಬಿ ಆರ್ಟ್ಸ್ ಆ?ಯಂಡ್ ಕಾಮರ್ಸ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶ್ವವಿದ್ಯಾಲಯ ಮಟ್ಟದ ಖೋ-ಖೋ ಪಂದ್ಯಾವಳಿಯಲ್ಲಿ ಮಹಾವಿದ್ಯಾಲಯದ ತಂಡವು ಉತ್ತಮ ಪ್ರದರ್ಶನ ನೀಡಿ ರನ್ನರ್ ಅಪ್ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತಾಧಿಕಾರಿಗಳು, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕಾರುಣ್ಯಾಶ್ರಮದಲ್ಲಿ ಒಳಬಳ್ಳಾರಿಯ ಚನ್ನಬಸವ ಮಹಾಶಿವಯೋಗಿಗಳ ಪುಣ್ಯಸ್ಮರಣೋತ್ಸವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಒಳಬಳ್ಳಾರಿ ಸುವರ್ಣಗಿರಿ ವಿರಕ್ತ ಮಠದ ತ್ರಿವಿಧ ದಾಸೋಹಿಮೂರ್ತಿಗಳು ಮಹಾ ತಪಸ್ವಿಗಳಾದ ಲಿಂಗೈಕ್ಯ ಶ್ರೀ ಮ. ನಿ. ಪ್ರ.ಚನ್ನಬಸವ ಮಹಾಶಿವಯೋಗಿಗಳ 44ನೇ ಪುಣ್ಯಾರಾಧನೆ ಸಮಾರಂಭ ಕಾರ್ಯಕ್ರಮವು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಶ್ರೀಮತಿ ಮಲ್ಲಮ್ಮ ಮಾಡಸಿರವಾರ ಸಾಮಾಜಿಕ ಸಾಂಸ್ಕೃತಿಕ ಸೇವಾ ಟ್ರಸ್ಟ್(ರಿ) ಮಾಡಸಿರವಾರ ಇವರುಗಳ ಸಹಯೋಗದಲ್ಲಿ ಆಶ್ರಯದಾತರುಗಳ ಮೂಲಕ ಲಿಂಗೈಕ್ಯ ಶ್ರೀ ಮ. ನಿ. ಪ್ರ. ಚನ್ನಬಸವ ಮಹಾಶಿವಯೋಗಿಗಳ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಿ ವಿಶೇಷ ಪ್ರಾರ್ಥನೆಯ ಮೂಲಕ ನೆರವೇರಿತು.**

ಇಂದಿನ ಈ ಕಾರ್ಯಕ್ರಮದ ಮಹಾಪ್ರಸಾದ ಸೇವೆಯನ್ನು ಶರಣಪ್ಪ ಗಚ್ಚಿನಮನಿ ಅತ್ತನೂರು ನಿವೃತ್ತ ಪೊಲೀಸ ಅಧಿಕಾರಿಗಳು ಇವರ ಕುಟುಂಬದಿಂದ ಮಹಾಪ್ರಸಾದ ಸೇವೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ



ಹಿರೇಮಠ ಮಾತನಾಡಿ ನಮ್ಮ ಒಳಬಳ್ಳಾರಿಯ ಶ್ರೀ ಮ. ನಿ. ಪ್ರ.ಚನ್ನಬಸವ ಮಹಾ ಶಿವಯೋಗಿಗಳು ನಡೆದಾಡುವ ದೇವರಾಗಿ ನಮ್ಮ ನಾಡಿನ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ ಶ್ರೀಗಳ ಹೆಸ-ರಿನ ಮೇಲೆ ಹುಟ್ಟಿಕೊಂಡಿರುವ ಈ ಕಾರುಣ್ಯ ಕುಟುಂಬದ ಕಾರುಣ್ಯ ಮೂರ್ತಿಗಳಾಗಿ ನಮ್ಮ ಸೇವೆಗೆ ಆಶೀರ್ವದಿಸುತ್ತಿದ್ದಾರೆ. ವಿಶೇಷವಾಗಿ ಈಗಿರುವ ಶ್ರೀ ಮ. ನಿ. ಪ್ರಾ. ಡಾ.ಸಿದ್ದಲಿಂಗ ಮಹಾ ಶಿವಯೋಗಗಳು ಹಾಗೂ ಶ್ರೀ ಮ. ನಿ. ಪ್ರಾ. ಮಹಾಲಿಂಗ ಮಹಾ ಶಿವಯೋಗಿಗಳು ನಮ್ಮ ಈ ಸೇವೆಗೆ ಸ್ಫೂರ್ತಿಯಾಗಿದ್ದಾರೆ. ಈ ಕಾರುಣ್ಯ ಕುಟುಂಬದಲ್ಲಿರುವ ಅಂಧ -ಅನಾಥರು ನೊಂದ ಜೀವಿಗಳು ದಿನಾಲು ಒಳಬಳ್ಳಾರಿ ಶ್ರೀಗಳ ಪ್ರಾರ್ಥನೆ ಮಾಡಿ ತಮ್ಮ ಬದುಕನ್ನು ನೋವನ್ನು ಮರೆಸುವ ಮೂಲಕ ಕಟ್ಟಿಕೊಂಡಿದ್ದಾರೆ. ಮತ್ತು ವಿಶೇಷವಾಗಿ ಈ ಸೇವಾ ಕಾರ್ಯದಲ್ಲಿ ನನಗೆ ಬರುವಂತಹ ಹಲವಾರು ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರ ಮತ್ತು ಮತ್ಸರದ ಮನಸ್ಸುಗಳಿಂದ ನನ್ನನ್ನು ಕಾಪಾಡುತ್ತಿದ್ದಾರೆ. ಸ್ವಾರ್ಥದ ಈ ಜಗತ್ತಿನಲ್ಲಿ ಒಳಬಳ್ಳಾರಿ ಶ್ರೀಗಳ ಆಶೀರ್ವಾದ ನಿಸ್ವಾರ್ಥತೆಯ ಪಾಠವನ್ನು ನನ್ನ ಹಾಗೂ ನನ್ನ ಕುಟುಂಬಕ್ಕೆ ಕರುಣಿಸಿರುವುದು ನಮ್ಮ ಕುಟುಂಬದ ಜನ್ಮ ಸಾರ್ಥಕವಾಗಿದೆ.

ಈ ಕಾರುಣ್ಯ ಆಶ್ರಮದ ಎಲ್ಲಾ ಸೇವಾ ಕಾರ್ಯಗಳಿಗೆ ಮತ್ತು ಯಶಸ್ವಿಗೆ ಒಳಬಳ್ಳಾ-ರಿಯ ಲಿಂಗೈಕ್ಯ ಶ್ರೀಮ ನಿ.ಪ್ರ ಚನ್ನಬಸವ ಮಹಾಶಿವಯೋಗಿಗಳ ಆಶೀರ್ವಾದವೇ ಕಾರಣ ಈ ಕರುಣೆಯ ಕಾರುಣ್ಯ ಕುಟುಂಬ ಒಳಬಳ್ಳಾರಿ ಶ್ರೀ ಮಠವಾಗಿ ಅಂದ ಅನಾಥರ ಬಾಳಿಗೆ ಬದುಕಿನ ಬಂಗಾರದ ಅರಮನೆಯಾಗಿದೆ. ಒಳಬಳ್ಳಾರಿ ಶ್ರೀ ಮಠದಲ್ಲಿ ಭಕ್ತರಿಗೆ ಶ್ರೀಗಳ ಆಶೀರ್ವಾದ ಕಾರುಣ್ಯ ಕುಟುಂಬದಲ್ಲಿ ಅನಾಥ-ರ ಬಾಳಿಗೆ ಬೆಳಕು ಇದುವೇ ಒಳಬಳ್ಳಾರಿಯ ಸುವರ್ಣಗಿರಿ ಕ್ಷೇತ್ರದ ಸಂಕಲ್ಪ. ಅವರು ನೀಡಿರುವ ಈ ನಮ್ಮ ಜನ್ಮವನ್ನು ಈ ರೀತಿ ಸಮಾಜಪರ ಜನಪರ ಅನಾಥಪರ ಕಾರ್ಯಗಳಲ್ಲಿ ಜಂಗಮನ ಜೋಳಿಗೆಯ ಮೂಲಕ ಬದುಕು ಸಾಗಿಸುತ್ತಿದ್ದೇವೆ. ಇಂತಹ ಸೇವೆಗೆ ಸಹಾಯ ಸಹಕಾರ ಮಾಡುವವರು ಒಳಬಳ್ಳಾ-ರಿಯ ಶ್ರೀಮಠ ಶ್ರೀ ಮಠದ ಭಕ್ತರು ಎಂದು ಮಾತನಾಡಿ ಶ್ರೀಗಳಿಗೆ ಪ್ರಾರ್ಥನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ವಿದ್ಯಾಶ್ರೀ. ಶಂಕ್ರಮ್ಮ. ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಆಶ್ರಮದ ಆಶ್ರಯದಾತರುಗಳು ಉಪಸ್ಥಿತರಿದ್ದರು.

## ಜಿಲ್ಲೆಯ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳು: AIMIM ನಗರಾಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ ಆಕ್ರೋಶ

**ಕುಡಿಯುವ ನೀರು, ರಸ್ತೆ, ಒಳಚರಂಡಿ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ; 200 ಕೋಟಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮರುಮನವಿ**

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾದ್ಯಂತ ಸಾರ್ವಜನಿಕರು ಎದುರಿಸುತ್ತಿರುವ ನೂರಾರು ಮೂಲಭೂತ ಸಮಸ್ಯೆಗಳನ್ನು ತುರ್ತಾಗಿ ಪರಿಹ-ರಿಸುವಂತೆ ಅಖಿಲ ಭಾರತ ಮಜ್ಲಿಸ್-ಎ-ಇತ್ತೆಹಾದ್-ಉಲ್-ಮುಸ್ಲಿಮೀನ್ (AIM-IM) ಪಕ್ಷದ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮರುಮನವಿ ಸಲ್ಲಿಸಿದ್ದಾರೆ.**

ಜ. 1, 2026ರಂದು ಉಲ್ಲೇಖ ಸಂಖ್ಯೆ Rcr/53/11/2026ರ ಅಡಿಯಲ್ಲಿ ಸಲ್ಲಿಸಿರುವ ಮನವಿ ಪತ್ರದಲ್ಲಿ, ಈ ಹಿಂದೆ ಆ. 15, 2026ರಂದು ಸಲ್ಲಿಸಿದ್ದ ಮನವಿಗೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ, ಸ್ವಚ್ಛತೆ, ಬೀದಿ ದೀಪಗಳು, ಆರೋಗ್ಯ, ಶಿಕ್ಷಣ, ಬೀದಿ ನಾಯಿಗಳ ಹಾವಳಿ, ಉದ್ಯೋಗ ಸೇ-ರಿದಂತೆ ಹಲವು ಸಮಸ್ಯೆಗಳು ಸಾರ್ವಜನಿಕರನ್ನು ಕಾಡುತ್ತಿವೆ. ಅಲ್ಲದೆ, ಪೊಲೀಸ್ ಇಲಾಖೆ ಹಾಗೂ ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರು, ರಸ್ತೆ,



ಒಳಚರಂಡಿ, ಸ್ವಚ್ಛತೆ ಮತ್ತು ಬೀದಿ ದೀಪಗಳ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದ್ದಾರೆ.

ಜೆಸ್ಕಾಂ ಅಧಿಕಾರಿಗಳ ವಿರುದ್ಧ ದೂರು: ರಾಯಚೂರು ನಗರದ ವಾರ್ಡ್ ನಂ. 14ರ ಮಂಗಳವಾರ ಪೇಟೆಯಲ್ಲಿ ಹಳೆಯ ಕಬ್ಬಿಣದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸ ಕಂಬಗಳನ್ನು ಅಳವಡಿಸುವಂತೆ ಮನವಿ ಮಾಡಲಾಗಿತ್ತು. ಈ ವಿಚಾರವಾಗಿ ಪ್ರಶ್ನಿಸಿದ ಕಿರಿಯ ಅಭಿಯಂತರರ (JE) ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವದೂರು ನೀಡಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿಲ್ಲ ಎಂದು ಆರೋಪಿಸಿದ್ದಾರೆ.

ವಿದ್ಯಾರ್ಥಿಗಳ ಸುರಕ್ಷತೆಗೆ ಪಾದಚಾರಿ ಮೇಲ್ಸೇತುವೆ: ಮಹಾತ್ಮ ಗಾಂಧಿ ಕ್ರೀಡಾಂಗಣದ ಹಿಂಭಾಗದಲ್ಲಿರುವ ಏಳು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ರೈಲ್ವೆ ಹಳಿಗಳನ್ನು ದಾಟುವಾಗ ತೊಂದರೆ ಅನುಭವಿಸುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ರೈಲ್ವೆ ಹಳಿ ಮೇಲೆ ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕೆಂದು ಮನವಿ ಮಾಡಿದ್ದರೂ ರೈಲ್ವೆ ಇಲಾಖೆ ಸ್ಪಂದಿಸಿಲ್ಲ ಎಂದು ತಿಳಿಸಿದ್ದಾರೆ.

ಸುಂಕಕೇಶ್ವರ ಹಾಳ್ ಗ್ರಾಮದ ಬಸ್ ನಿಲ್ದಾಣ ತೆರವುಗೊಳಿಸಲು ಆಗ್ರಹ: ದೇವದುರ್ಗ ತಾಲೂಕಿನ ಸುಂಕಕೇಶ್ವರ ಹಾಳ್ ಗ್ರಾಮದ ಶಿಥಿಲಾವಸ್ಥೆಯಲ್ಲಿರುವ ಹಳೆಯ ಬಸ್ ನಿಲ್ದಾಣ ಕುಸಿದು ಬೀಳುವ ಅಪಾಯವಿದ್ದು, ಅದನ್ನು ತೆರವುಗೊಳಿಸುವಂತೆ ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ದೂರಿದ್ದಾರೆ.

200 ಕೋಟಿ ಅನುದಾನ ಬಿಡುಗಡೆಗೆ ಒತ್ತಾಯ: ರಾಜ್ಯ ಬಜೆಟ್ 2026-27ರಲ್ಲಿ ರಾಯಚೂರು ನಗರಕ್ಕೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ 2.0 ಅಡಿಯಲ್ಲಿ ಘೋಷಿಸಿರುವ ?200 ಕೋಟಿ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡಿಲ್ಲ. ಮತ್ತೊಂದೆಡೆ ಮನೆ ತೆ-ರಿಗೆ ಸೇರಿದಂತೆ ಇತರೆ ತೆರಿಗೆಗಳ ಹೆಚ್ಚಳದಿಂದ ಸಾರ್ವಜನಿಕರಿಗೆ ಆರ್ಥಿಕ ಹೊರೆ ಉಂಟಾಗಿದೆ ಎಂದು ಮನವಿಯಲ್ಲಿ ಪ್ರಸ್ತಾಪಿಸಿದ್ದಾರೆ.

ವಕ್ಸ್ ಸಲಹಾ ಸಮಿತಿ ಅಧ್ಯಕ್ಷರ ನೇಮಕಕ್ಕೆ ಆಗ್ರಹ: ರಾಯಚೂರು ಜಿಲ್ಲಾ ವಕ್ಸ್ ಸಲಹಾ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡುವಂತೆ ಈ ಹಿಂದೆ ಮನವಿ ಸಲ್ಲಿಸಿದ್ದರೂ ಇದುವರೆಗೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ ವಿವಿಧ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು ತುರ್ತು ಸಭೆ ನಡೆಸಿ, ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಕೈಗೊಂಡ ಕ್ರಮಗಳ ಕುರಿತು ಲಿಖಿತ ಉತ್ತರ ನೀಡಬೇಕೆಂದು ಶಬ್ಬೀರ್ ಅಹ್ಮದ್ ಹೌದಡಿ ಅವರು ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

## ಕಂಪ್ಲಿ: ಕ್ರೀಡೆ ಸೌಹಾರ್ದತೆಯ ಪ್ರತೀಕ ಎಂದ ಜಗದೀಶ ಹೊಸಕೋಟೆ

ನೈಜ್ಯ ದೆಸೆ ನ್ಯೂಸ್

**ಕಂಪ್ಲಿ: ಕ್ರೀಡೆಗಳು ಕೇವಲ ದೈಹಿಕ ಫಿಟ್‌ನೆಸ್‌ಗೆ ಮಾತ್ರ ಸೀಮಿತವಾಗಿರದೆ, ಯುವಜನರಲ್ಲಿ ಒಗ್ಗಟ್ಟು, ಶಿಸ್ತು ಮತ್ತು ಸೌಹಾರ್ದತೆಯನ್ನು ಹೆಚ್ಚಿಸುತ್ತವೆ ಎಂದು ವೀರಶೈವ ಲಿಂಗಾಯತ ಮಹಾವೇದಿಕೆಯ ಬಳ್ಳಾರಿ ಜಿಲ್ಲಾಧ್ಯಕ್ಷರಾದ ಜಗದೀಶ್ ಹೊಸಕೋಟೆ ಅಭಿಪ್ರಾಯಪಟ್ಟರು.**

ತಾಲೂಕಿನ ಮುದ್ದಾಪುರದ ಯಲ್ಲಮ್ಮ ಕ್ಯಾಂಪ್ ನಂ 10 ರ ಮೈದಾನದಲ್ಲಿ ಆಯೋಜಿಸಲಾಗಿದ್ದ 'ಗೌಳಿ ಬಾಯ್ಸ್ ಕಂಪ್ಲಿ ಪ್ರೀಮಿಯರ್ ಲೀಗ್' ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಗ್ರಾಮೀಣ ಭಾಗದ ಯುವಕರಲ್ಲಿ ಅದ್ಭುತ ಕ್ರೀಡಾ ಪ್ರತಿಭೆಯಿರುತ್ತದೆ. ಇಂತಹ ಸ್ಥಳೀಯ ಲೀಗ್ ಪಂದ್ಯಾವಳಿಗಳು ಆ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಉತ್ತಮ ವೇದಿಕೆಯಾಗಿವೆ. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಕ್ರೀಡಾ ಮನೋಭಾವದಿಂದ ಆಟವಾಡುವುದು ಮುಖ್ಯ" ಎಂದು ಅವರು ಆಟಗಾರರಿಗೆ ಕರೆ



ನೀಡಿದರು. ಕಾರ್ಯಕ್ರಮದ ಮುಕ್ತಾಯದ ವೇಳೆ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಕರ್ನಾಟಕ ಗೌಳಿ ಸಮಾಜದ ಅಧ್ಯಕ್ಷರಾದ ಗೌಳಿ ಕುಮಾರ್ ಮತ್ತು ಕಂಪ್ಲಿ ತಾಲೂಕು ಕರವೇ (ನಾರಾಯಣಗೌಡ ಬಣ) ಅಧ್ಯಕ್ಷರಾದ ಬಳೆ ಮಲ್ಲಿಕಾರ್ಜುನ ವೇದಿಕೆಯಲ್ಲಿ ಮಾತನಾಡಿದರು. ಪ್ರಮುಖರಾದ ಗೌಳಿ ಪಂಪಾಪತಿ, ಹಂಪರೆಡ್ಡಿ, ರಾಜ ಮೆಟ್ರಿ, ಶಂಭುಲಿಂಗ, ಮಂಜುನಾಥ, ಬಿ. ರಾಜಾವಲಿ, ಶಿವಯ್ಯ, ಗುರು, ಮೌಲಹುಸೇನ್, ಗೌಳಿ ಸಮಾಜದ ಮುಖ್ಯಸ್ಥರಾದ ಗಂಗಾಧರ ,ರುದ್ರೇಶ್ , ಶಿವಯ್ಯ, ರಮೇಶ್,ಲೋಕೇಶ್, ಪಂಪಾಪತಿ, ಬಸವರಾಜ ಮುದ್ದಾಪುರ, ಮಲ್ಲಿಕಾರ್ಜುನ, ಬಸವರಾಜ, ಗಂಗಾಧರ ಹೊಸಪೇಟೆ, ಸೇ-ರಿದಂತೆ ಗೌಳಿ ಸಮಾಜದ ಯುವ ಮುಖಂಡರು ಹತ್ತಾರು ಗಣ್ಯರು ಉಪಸ್ಥಿತರಿದ್ದರು.

ಕ್ರಿಕೆಟ್ ಹಬ್ಬಕ್ಕೆ ತೆರೆ: ಭಾನುವಾರ ಜರುಗಿದ ರೋಮಾಂಚಕ ಮುದ್ದಾಪುರದ ಯಲ್ಲಮ್ಮ ಕ್ಯಾಂಪ್ ಮೈದಾನದಲ್ಲಿ ಧೂಳೆಬ್ಬಿಸಿದ್ದ 'ಗೌಳಿ ಬಾಯ್ಸ್ ಕಂಪ್ಲಿ ಪ್ರೀಮಿಯರ್ ಲೀಗ್' ಕ್ರಿಕೆಟ್ ಪಂದ್ಯಾವಳಿಯು ಭಾನುವಾರ (ನವೆಂಬರ್ 1) ಜರುಗಿದ ರೋಚಕ ಫೈನಲ್ ಪಂದ್ಯದೊಂದಿಗೆ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಟೂರ್ನಿಯಲ್ಲಿ ವಿಜೇತ ತಂಡ ಹೊಸಪೇಟೆ ಗೌಳೇರ್ ಹಟ್ಟಿ ರನ್ನರ್ ಅಪ್ ತಂಡ ಗೌಳಿ ಬಾಯ್ಸ್ ಮುದ್ದಾಪುರ ತಂಡ ಕ್ರೀಡಾಭಿಮಾನಿಗಳ ಭಾರಿ ಕರತಾಡನದ ನಡುವೆ ವಿಜೇತ ತಂಡಗಳು ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು. ಪಂದ್ಯ ಮುಕ್ತಾಯದ ನಂತರ ಜರುಗಿದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳು ವಿಜೇತ ಮತ್ತು ರನ್ನರ್-ಅಪ್ ತಂಡಗಳಿಗೆ ಆಕರ್ಷಕ ಟ್ರೋಫಿ ಹಾಗೂ ಬಹುಮಾನಗಳನ್ನು ವಿತರಿಸಿ ಗೌರವಿಸಿದರು. ಕಂಪ್ಲಿ ಸೇರಿದಂತೆ ಸುತ್ತಮುತ್ತಲಿನ ನೂರಾರು ಕ್ರಿಕೆಟ್ ಪ್ರೇಮಿಗಳು ಹಾಜರಿದ್ದು ಕ್ರೀಡಾಕೂಟದ ಯಶಸ್ಸಿಗೆ ಸಾಕ್ಷಿಯಾದರು.

## ವಕೀಲ ವೃತ್ತಿಯಲ್ಲಿ ಯಶಸ್ಸು ಬೇಕಿದ್ದರೆ ನ್ಯಾಯಮೂರ್ತಿಗಳನ್ನು ಗೌರವಿಸಬೇಕು: ನಾರಾಯಣಸ್ವಾಮಿ ಜಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವಕೀಲಿ ವೃತ್ತಿಯಲ್ಲಿ ಘನತೆ, ಗೌರವ, ಯಶಸ್ಸು ಸಿಗಬೇಕಾದರೆ, ನ್ಯಾಯವಾದಿಗಳು ನ್ಯಾಯಾಧೀಶರಿಗೆ ಕಲಾಪದಲ್ಲಾಗಲಿ, ನ್ಯಾಯಾಲಯದ ಹೊರಗಡೆಯಾಗಲಿ, ಗೌರವವನ್ನು ನೀಡಿದರೆ ಅವರಿಗೆ ನೀಡುವ ಗೌರವದಿಂದ ಸಮಾಜ ಅಥವಾ ಕಕ್ಷಿದಾರರ ಮುಂದೆ ನಮ್ಮ ಗೌರವವೂ ಹೆಚ್ಚುತ್ತದೆ ಎಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ನೂತನವಾಗಿ ಆಯ್ಕೆಯಾಗಿರುವ ನಾರಾಯಣಸ್ವಾಮಿ ಜಿ ಅಭಿಪ್ರಾಯ ಪಟ್ಟರು.**

ಸಿಂಧನೂರು ನ್ಯಾಯಾಲಯದ ವಕೀಲರ ಸಭಾ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಖಿಲ ಭಾರತ ವಕೀಲರ ಒಕ್ಕೂಟದ ಪ್ರಥ-ಮ ತಾಲೂಕು ಮಟ್ಟದ ಸಮ್ಮೇಳನನ್ನು ಉದ್ದೇಶಿಸಿ ಮಾತನಾಡಿದ ಅವರು, ಅಖಿಲ ಭಾರತ ವಕೀಲರ ಒಕ್ಕೂಟವು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ. ಅಖಿಲ ಭಾರತ ವಕೀಲರ ಒಕ್ಕೂಟವು ನಡೆಸಿಕೊಂಡು ಹೋಗುವ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಸ್ಥಳೀಯ ವಕೀಲರ ಸಂಘ ಸಹಕಾರದ ಜೊತೆಗೆ ನಡೆಸಿದರೆ ವಕೀಲರ ಸಂಘ ಹಾಗೂ ಅಖಿಲ ಭಾರತ ವಕೀಲರ ಒಕ್ಕೂಟ ಗಟ್ಟಿಗೊಳ್ಳುತ್ತದೆ ಎಂದರು.

ಬಾರ್ ಮತ್ತು ಬೆಂಚ್ ಎರಡು ಒಂದಕ್ಕೊಂದು ಅವಿನಾವಭಾವ ಸಂಬಂಧವನ್ನು



ಹೊಂದಿವೆ. ಎತ್ತಿನ ಬಂಡಿಗೆ ಯಾವ ರೀತಿ ಎರಡು ಚಕ್ರಗಳ ಮುಖ್ಯವೋ ಅದೇ ರೀತಿ ಕಕ್ಷಿದಾರರಿಗೆ ನ್ಯಾಯ ಒದಗಿಸಲು ನ್ಯಾಯಾಲಯ ಮುಖ್ಯ. ನಮ್ಮ ನಮ್ಮ ಸಮಸ್ಯೆಗಳ ಮಧ್ಯೆ ನ್ಯಾಯಕ್ಕಾಗಿ ಬರುವ ಕಕ್ಷಿದಾರರಿಗೆ ಯಾವುದೇ ಸಮಸ್ಯೆಯಾಗದಂತೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು. ವಕೀಲರು ಧರಿಸುವ ಬಟ್ಟೆಗಳ ಮೇಲೆ ಕಕ್ಷಿದಾರರು ವಕೀಲರ ಫೀಸ್‌ನ್ನು ನಿರ್ಧಸುತ್ತಾರೆ. ವಕೀಲರಿಗೆ ಮುಖ್ಯವಾಗಿ ಧರಿಸುವ ಬಟ್ಟೆಗಳ ಮೇಲೆ ಕಾಳಜಿ ಇರಬೇಕು ಜೊತೆಗೆ ಶಿಸ್ತಿನ ಸಿಪಾಯಿಯಂತೆ ಇದ್ದಾಗ ಮಾತ್ರ ಒಬ್ಬ ಒಳ್ಳೆಯ ವಕೀಲನಾಗಲು ಸಾಧ್ಯ. ಕಿರಿಯ ವಕೀಲರು ಕೋರ್ಟಗೆ ಆಗಮಿಸುವಾಗ ಶುಭ್ರವಾದ ಬಟ್ಟೆ, ಕೋರ್ಟ್, ಕಾಲಿಗೆ ಶೂಗಳನ್ನು ತಪ್ಪದೇ ಧರಿಸಬೇಕು. ನ್ಯಾಯಾಲಯದ ಕಲಾಪಗಳಲ್ಲಿ ನ್ಯಾಯಮೂರ್ತಿಗಳ ಮುಂದೆ ನಾವು ಮಂಡಿಸುವ ವಿಷಯಗಳು ವಿನಯ ಭರಿತವಾಗಿರಬೇಕೆ ವಿನಹ ರೋಷ, ಕೋಪದಿಂದ ಕೂಡಿರಬಾರದು ಎಂದರು.

ನನಗೆ ಸಿಂಧನೂರು ತುಂಬಾ ಅಚ್ಚು ಮೆಚ್ಚು, ನಾನು ಚುನಾವಣೆಯಲ್ಲಿ ಬಹುಮತ ಪಡೆಯಲು ಸಿಂಧನೂರು ವಕೀಲರ ಸಂಘ ಕಾರಣ. ಚುನಾವಣೆಯಲ್ಲಿ ನಾನು ಸೋಲುತ್ತೇನೆ ಎಂದು ಹಲವಾರು ಹಿರಿಯ ವಕೀಲರು ಹೇಳಿದರು ಆದ-ರೆ ಮತ ಎಣಿಕೆಯ ಸಂದರ್ಭದಲ್ಲಿ ಸಿಂಧನೂರು ವಕೀಲರ ಮತಗಳ ಎಣಿಕೆಯ ನಂತರ ಒಟ್ಟು ಮತಗಳ ಅಂತರದಲ್ಲಿ ನಾನು ಎಲ್ಲ-ರಿಗಿಂತಲೂ ಮುಂದೆ ಸಾಗಿ ಆಯ್ಕೆಗೊಂಡಿದ್ದೇನೆ ಎಂದ ಅವರು ಸಿಂಧನೂರು ಸಂಘಕ್ಕೆ ನಾನು ಸದಾ ಚಿರಋಣಿ ಆಗಿರುತ್ತೇನೆ ಎಂದರು.

ಸಿಂಧನೂರು 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸೋಮಶೇಖರ ಎ ಅವರು ಮಾತನಾಡಿ, ನಾನು ಕಿರಿಯ ವಕೀಲರಾಗಿ ಸಾಕಷ್ಟು ತರಬೇತಿ ಹೊಂದಿದ್ದೇನೆ. ಕಿರಿಯ ವಕೀಲರ ಶ್ರೇಯಾಭಿವೃದ್ಧಿಗೆ ನಾನು ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ನಿಮ್ಮ ಸಂಘಗಳಿಂದ ಕಾನೂನು ಕಾರ್ಯಗಾರ ನಡೆಸಿದರೆ ಅದರಲ್ಲಿ ನಾನು ಪಾಠ ಮಾಡಲು ಸಿದ್ಧನಿದ್ದೇನೆ ಎಂದರು. ಅಖಿಲ ಭಾರತ ವಕೀಲರ ಒಕ್ಕೂಟದ ಜಿಲ್ಲಾಧ್ಯಕ್ಷ ಹಾಗೂ ಹಿರಿಯ ವಕೀಲ ಶಶಿಧರ್‌ಗೌಡ ಕೆಲ್ಲೂರು ಮಾತನಾಡಿ ಏಲು ಹಾಗೂ ವಕೀಲರ ಪರಿಷತ್ತು ಕೂಡಿ ವಕೀಲರ ಸಮಸ್ಯೆಗಳ ಪರಿಹಾರದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಬದಲಾವಣೆ ಮಾಡಬೇಕಾಗಿದೆ. ಈಗಾಗಲೇ ನಾವು ಕಂಡಂತೆ ನ್ಯಾಯಾಧೀಶರ ಮೇಲೆ ಹಲ್ಲೆ, ವಕೀಲರ ಮೇಲೆ ಹಲ್ಲೆ ಪ್ರಕರಣ ದಾಖಲು ಮಾಡುವುದು ಸೇ-ರಿದಂತೆ ಅನೇಕ ಪ್ರಕರಣಗಳು ನಡೆಯುತ್ತಿವೆ ಇವುಗಳ ಬಗ್ಗೆ ಒಕ್ಕೂಟವು ಸೂಕ್ತ ಸಲಹೆ ಸೂಚನೆಗಳ ಮೂಲಕ ಪರಿಹರಿಸಬೇಕಿದೆ ಅದನ್ನು ಮುಂದಿನ ದಿನಗಳಲ್ಲಿ ಮಾಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ: ಹಿರಿಯ ಶ್ರೇಣಿ ನ್ಯಾಯಾಧೀಶ ಲಕ್ಷ್ಮಿಕಾಂತ್ ಮಿಸ್ಕಿನ್, ಪ್ರಧಾನ ನ್ಯಾಯಾಧೀಶೆ ರೂಪ ಸಿ ವಗ್ಗ, ಒಂದನೇ ಹೆಚ್ಚುವರಿ ನ್ಯಾಯಾಧೀಶೆ ಸರಸ್ವತಿ ಹೊಟ್ಕರ್, ಎರಡನೇ ಹೆಚ್ಚುವರಿ ನ್ಯಾಯಾಧೀಶ ವಿಜಯ್ ಕುಮಾರ್ ಬುದ್ರಿ, ಅಖಿಲ ಭಾರತ ವಕೀಲರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಆರ್.ಕೆ.ದೇಸಾಯಿ, ತಾಲೂಕು ಅಧ್ಯಕ್ಷ ಅಬ್ದುಲ್ ಗನಿಸಾಬ, ಗೌರವಾಧ್ಯಕ್ಷ ಜಿಎಸ್‌ಆರ್‌ಕೆ ರೆಡ್ಡಿ, ಉಪಾಧ್ಯಕ್ಷ ಶೇಖರಪ್ಪ ದುಮತಿ, ಕಾರ್ಯದರ್ಶಿ ಕೃಷ್ಣ ಬಿ.ಎಂ, ಖಜಾಂಚಿ ಸೈಯದ್ ರಬಾನಿ ಜಾಗೀರದಾರ್, ಸಿಂಧನೂರು ವಕೀಲರ ಸಂಘದ ಉಪಾಧ್ಯಕ್ಷ ಜಗದೀಶ್, ಕಾರ್ಯದರ್ಶಿ ದುರ್ಗೇಶ, ಖಜಾಂಚಿ ಶೇಖರಪ್ಪ ಗಡೇದ್, ಸಹ ಕಾರ್ಯದರ್ಶಿ ಹೀನಾ ಅಂಬ್ರಿನ್, ಅಮರೇಶ ಪೋತ್ನಾಳ ಗುಜ್ಜಲ್ ವಕೀಲರು, ಸೇ-ರಿದಂತೆ ಹಿರಿಯ, ಕಿರಿಯ ವಕೀಲರು ಇದ್ದರು.

## ನೇಮಕಾತಿ ಪ್ರಕಟಣೆ

**RRB ನೇಮಕಾತಿ 2026 ? 1215 ಸ್ಟೇಷನ್ ಮಾಸ್ಟರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 27, 2026**

RRB ನೇಮಕಾತಿ 2026: 1215 ಸ್ಟೇಷನ್ ಮಾಸ್ಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರೈಲ್ವೆ ನೇಮಕಾತಿ ಮಂಡಳಿಯು (RRB) ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಸ್ಟೇಷನ್ ಮಾಸ್ಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರೈಲ್ವೆ ಇಲಾಖೆಯಲ್ಲಿ (ಭಾರತ ಸರ್ಕಾರದ ರೈಲ್ವೆ ಸಚಿವಾಲಯ) ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಬಯಸುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25ನೇ ನವೆಂಬರ್ 2026ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: indianrailways.gov.in

## ವಿಶ್ವವಿದ್ಯಾಲಯ ಮಟ್ಟದ ಬಾಸ್ಕೆಟ್‌ಬಾಲ್ ತಂಡಕ್ಕೆ ತನ್ವೀರ್ ಜಮಾದಾರ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಶ್ರೀ ಎಸ್.ಎಸ್. ವಿದ್ಯಾಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಚ್.ಎಸ್. ಪಾಟೀಲ ದೈಹಿಕ ಶಿಕ್ಷಣ ಮಹಾವಿದ್ಯಾಲಯದ (ಬಿ.ಪಿ.ಎಡ್) ಪ್ರಥಮ ವರ್ಷದ ವಿದ್ಯಾರ್ಥಿ ತನ್ವೀರ್ ಜಮಾದಾರ ಅವರು 2026?27ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಬಾಸ್ಕೆಟ್‌ಬಾಲ್ ತಂಡಕ್ಕೆ ಆಯ್ಕೆಯಾಗುವ ಮೂಲಕ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.**



ಇತ್ತೀಚೆಗೆ ಬಂಜಾರ ದೈಹಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ತನ್ವೀರ್ ಜಮಾದಾರ ಅವರು ತಮ್ಮ ಕ್ರೀಡಾ ಕೌಶಲ್ಯವನ್ನು ಪ್ರದರ್ಶಿಸಿ ವಿಶ್ವವಿದ್ಯಾಲಯ ಮಟ್ಟದ ಬಾಸ್ಕೆಟ್‌ಬಾಲ್ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

ಅಭಿನಂದನೆ: ವಿದ್ಯಾರ್ಥಿಯ ಈ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್. ಪಾಟೀಲ, ಕಾರ್ಯದರ್ಶಿ ಸಚಿನ್ ಎಚ್. ಪಾಟೀಲ, ಆಡಳಿತಾಧಿಕಾರಿ ಕಿರಣ್ ಎಚ್. ಪಾಟೀಲ, ಮಹಾವಿದ್ಯಾಲಯದ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಮಹಿಳಾ ಸಾಹಿತಿಗಳ ನಿರ್ಲಕ್ಷ್ಯ ಖಂಡನೀಯ: ಡಾ. ಸುಜಾತಾ ಚಲವಾದಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ವಿಜಯಪುರ ಜಿಲ್ಲೆ ಸಾಹಿತ್ಯ ಮತ್ತು ಸಾಂಸ್ಕೃತಿ-ಕ ಕ್ಷೇತ್ರದಲ್ಲಿ ರಾಜ್ಯಮಟ್ಟದಲ್ಲಿ ತನ್ನದೇ ಆದ ಮಹತ್ವದ ಛಾಪು ಮೂಡಿಸಿದೆ. ಆದರೆ, ಇತ್ತೀಚೆಗೆ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾಹಿತಿಗಳ ಹೆಸರುಗಳನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ಮಹಿಳಾ ಸಾಹಿತಿಗಳನ್ನು ಕಡೆಗಣಿಸಿರುವುದು ಜಿಲ್ಲಾಡಳಿತದ ದೊಡ್ಡ ಪ್ರಮಾದವಾಗಿದೆ ಎಂದು ಉಪನ್ಯಾಸಕಿ ಹಾಗೂ ಸಾಹಿತಿ ಡಾ. ಸುಜಾತಾ ಚಲವಾದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.**



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಹಿಳಾ ಸಾಹಿತಿಗಳನ್ನು ನಿರ್ಲಕ್ಷಿಸಿರುವುದು ಪುರುಷ ಪ್ರಧಾನ ಮನೋಭಾವನೆಯನ್ನು ಪ್ರತಿಬಿಂಬಿಸುತ್ತದೆ. ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಮಹಿಳಾ ಸಾಹಿತಿಗಳ ಕೊಡುಗೆಯೂ ಅಪಾರವಾಗಿದೆ. ಜಯಶ್ರೀ ಯರನಾಳ, ಸರಸ್ವತಿ ಚಿಮ್ಮಲಗಿ, ಶಾಂತಾ ಇಮ್ರಾಪೂರ, ಇಂದುಮತಿ ಲಮಾಣಿ, ಸುಶೀಲಾ ಕಮತಗಿ, ಭಾರತಿ ಪಾಟೀಲ, ಡಾ. ಸುಜಾತಾ ಚಲವಾದಿ, ಪ್ರಭಾವತಿ ದೇಸಾಯಿ, ದಾಕ್ಷಾಯಣಿ ಹುಡೇದ, ದಾಕ್ಷಾಯಣಿ ಬಿರಾದಾರ, ಹೇಮಲತಾ ವಸ್ತ್ರದ ಹಾಗೂ ವಿದ್ಯಾವತಿ ಅಂಕಲಗಿ ಸೇರಿದಂತೆ ಅನೇಕರು ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಇಷ್ಟೊಂದು ಪ್ರತಿಭಾವಂತ ಮಹಿಳಾ ಸಾಹಿತಿಗಳಿದ್ದರೂ, ಜಿಲ್ಲಾಡಳಿತದ ಅಧಿಕೃತ ಕಾರ್ಯಕ್ರಮದಲ್ಲಿ ಅವರಲ್ಲಿ ಒಬ್ಬರ ಹೆಸರನ್ನೂ ಸ್ಮರಿಸದಿರುವುದು ವಿಷಾದನೀಯ. ಇದು ಮಹಿಳಾ ಸಾಹಿತಿಗಳ ಸಾಹಿತ್ಯಿಕ ಸಾಧನೆಗೆ ಮಾಡಿದ ಅವಮಾನವಾಗಿದೆ. ಮಹಿಳಾ ಲೇಖಕಿಯಾಗಿ ಇಂತಹ ತಾರತಮ್ಯದ ಬೆಳವಣಿಗೆಯನ್ನು ತೀವ್ರವಾಗಿ ಖಂಡಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗ್ರಾಮೀಣ ಭಾಗದ ಮಕ್ಕಳು ಉತ್ತಮ ಶಿಕ್ಷಣ ಪಡೆದುಕೊಳ್ಳಲ್ಲಿ ಸಂಸದ ಸುನೀಲ್ ಬೋಸ್ ಕರೆ

❑ ನೈಜ್ಯ ದೆಸೆ ನ್ಯೂಸ್

**ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿದೆ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪೋಷಕರಿಗೆ ಕರೆ ನೀಡಿದರು ಚಾಮರಾಜನಗರ**



ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ನಂಜನಗೂಡು ತಾಲ್ಲೂಕಿನ ವೆಂಕಟಗಿರಿ ಕಾಲೋನಿ ಹಾಗೂ ನಾಗಣಾಪುರ ಕಾಲೋನಿಯಲ್ಲಿ ಸುಮಾರು 4 ಕೋಟಿ ರೂ ವೆಚ್ಚದ ನೂತನವಾಗಿ ನಿರ್ಮಿಸಿರುವ ಶ್ರೀ ಮಹಾರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯ ಕಟ್ಟಡವನ್ನು ಉದ್ಘಾಟಿಸಿ ಸುನಿಲ್ ಬೋಸ್ ರವರು ಮಾತನಾಡುತ್ತಾ ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಣ ನೀಡಿದರೆ ಮುಂದಿನ ವಿಧ್ಯಾರ್ಥಿಗಳು ದೇಶದಲ್ಲಿ ಉತ್ತಮ ಪ್ರಜೆಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.ಕಾಡಾಂಚಿನ ಗ್ರಾಮಗಳಲ್ಲಿ ಇಂತಹ ಕಟ್ಟಡ ಮುಖ್ಯವಾಗಿದೆ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಶಿಕ್ಷಣ ಕೊಡಿಸಬೇಕು.ದೇಶದಲ್ಲಿ ಉತ್ತಮ ಪ್ರಜೆಯಾಗಿ ಬೆಳೆಯಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಆದ್ದರಿಂದ ಪೋಷಕರು ತಮ್ಮ ಮಕ್ಕಳಿಗೆ ಆಸ್ತಿಗಿಂತ ಶಿಕ್ಷಣ ಕೊಡಿಸಲು ಮುಂದಾಗಬೇಕಿದೆ.ಎಂದು ಹೇಳಿದ ಶಾಸಕರು ಶಿಕ್ಷಣ ಪ್ರಗತಿಗೆ ನಮ್ಮ ಸರ್ಕಾರ ಬದ್ಧವಾಗಿದ್ದು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಅನುದಾನ ಕೊಡಿಸುವ ಮೂಲಕ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಶ್ರಮವಹಿಸುತ್ತಿದ್ದೇವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ರವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಗ್ಯಾರಂಟಿ ಸಮಿತಿ ತಾಲ್ಲೂಕು ಅದ್ಯಕ್ಷ ಕೆ ಮಾರುತಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ವ್ಯವಸ್ಥಾಪನೆ ಸಮಿತಿಯ ಮಾಜಿ ಅಧ್ಯಕ್ಷ ಹೆಜ್ಜೆ ಆರ್ ಇಂದನ್ ಬಾಬು ಗುತ್ತಿಗೆದಾರ ರವಿಕುಮಾರ್ ಗೋಪಾಲಕೃಷ್ಣ ತಾಲೂಕು ಕುರುಬ ಸಂಘದ ಮುಖಂಡ ಕೆಂಪಣ್ಣ ಕೆ ಬಿ ಸ್ವಾಮಿ ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜರಾಲ್ಡ್ ರಾಜೇಶ್,ಮುಖಂಡರುಗಳಾದ ಸುಬ್ರಹ್ಮಣ್ಯ, ಮಲ್ಕುಂಡಿ ಪುಟ್ಟಸ್ವಾಮಿ, ಗೋವಿಂದರಾಜು, ತರಗನಹಳ್ಳಿ ನಂಜುಂಡಸ್ವಾಮಿ,ಸೇರಿದಂತೆ ಮುಖಂಡರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಿಕ್ಷಕರು ಹಾಜರಿದ್ದರು

# ಚಲನಚಿತ್ರ ನಟ, ನಿರ್ದೇಶಕ ಚಂದ್ರಹಾಸ ಆಳ್ವರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ಹುಬ್ಬಳ್ಳಿ: ಚಿತ್ರರಂಗದ ಧ್ರುವತಾರೆ ಅವರೊಂದಿಗೆ ಕೆಲಸ ಮಾಡಿದ ಹಿರಿಯ ನಟ-ನಿರ್ದೇಶಕ-ನಿರ್ಮಾಪಕ ಚಂದ್ರಹಾಸ ಆಳ್ವ ಅವರನ್ನು ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಸನ್ಮಾನಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಈಶ್ವರಿಯ ವಿಶ್ವವಿದ್ಯಾಲಯದ ಜ್ಞಾನಲೋಕ ಮ್ಯೂಸಿಯಂ ನಿರ್ದೇಶಕರಾದ ಡಾ.ಬಿ.ಕೆ.ಬಸವರಾಜ ರಾಜ ಋಷಿಗಳು ಹೇಳಿದರು.**

ಅವರು ಬೈರಿದೇವರಕೊಪ್ಪದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಹುಬ್ಬಳ್ಳಿಯ ಡಾ. ಸಂಗಮೇಶ್ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ, ಕನ್ನಡ ಧ್ವನಿ ಟ್ರಸ್ಟ್ ಹಾಗೂ ಅಭಿ ಕ್ರಿಯೇಶನ್ಸ್ ಗದಗ ವತಿಯಿಂದ ಕನ್ನಡ ರಾಜ್ಯೋತ್ಸವ ನಿಮಿತ್ತ ನಡೆದ "ಹೆಮ್ಮೆಯ ಕನ್ನಡಿಗ"ರ ಸನ್ಮಾನ



ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು. ನಟ-ನಿರ್ದೇಶಕ ಚಂದ್ರಹಾಸ ಅಳ್ವ ಮಾತನಾಡಿ ಸಿನಿಮಾಗಳ ಮೂಲಕ ಕನ್ನಡ ಉಳಿಯುವುದಕ್ಕೆ ನಾವು ಕಂಕಣ ಬದ್ಧರಾಗಿ ಕೆಲಸ ಮಾಡುತ್ತಿದ್ದೇವೆ. ಕನ್ನಡದಲ್ಲಿ ಇನ್ನಷ್ಟು ಉತ್ತಮ ಚಿತ್ರಗಳು ಮೂಡಿ ಬರಬೇಕು. ಕುಟುಂಬ ಸಮೇತ ಕುಳಿತು ನೋಡುವ ಸಿನಿಮಾಗಳು ಹೆಚ್ಚಾಗಬೇಕಿದೆ.

ಇತ್ತೀಚಿಗೆ ಧಾರ್ಮಿಕ ಸಿನಿಮಾಗಳು ಕಡಿಮೆಯಾಗುತ್ತಿವೆ. ಆದರೆ ಅಂತ ಸಿನಿಮಾ ನೋಡುವ ಒಂದು ವರ್ಗ ಇದ್ದೇ ಇದೆ. ಇಂದು ಕನ್ನಡ ಸಿನಿಮಾಗಳ ಟ್ರೆಂಡ್ ಬದಲಾಗಿದೆ ಎಂದು ಸಹಪಾಠಿಗಳಾದ ರಜನಿಕಾಂತ, ಅಶೋಕ ಅವರ ಆ ದಿನಗಳ ಮೆಲುಕು ಹಾಕಿದರಲ್ಲದೆ ನಿರ್ದೇಶಕ ಪುಟ್ಟಣ್ಣ ಕಣಗಾಲರ ಗರಡಿಯಲ್ಲಿ ಪಳಗಿದ ಕು-ರಿತು ವಿಷಯ ಹಂಚಿಕೊಂಡರು. ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ ಮಾತನಾಡಿ ಚಿತ್ರರಂಗದಲ್ಲಿ ಚಂದ್ರಹಾಸ ಆಳ್ವ ಅವರು ತಮ್ಮದೇ ಆದ ಚಾಪನ್ನು ಮೂಡಿಸಿದವರು. ರೀಲ್ ನಿಂದ ಇಂದಿನ ಡಿಜಿಟಲ್ ಯುಗದವರೆಗಿನ ಕೆಲಸವನ್ನು ಬಲ್ಲವರು. ಹೀಗಾಗಿ ರೀಲ್ ಮತ್ತು ಡಿಜಿಟಲ್ ಯುಗದ ಕೊಂಡಿಯಾಗಿ ನಮ್ಮ ಜೊತೆಗಿದ್ದಾರೆ. ಸಾಮಾಜಿಕ ಸಂದೇಶ ನೀಡುವ ಹಲವು ಚಿತ್ರಗಳನ್ನು ಆಳ್ವ ನೀಡಿದ್ದಾರೆ.

ಇವರು ಈ ಸಾಧನೆಯನ್ನು ಗಮನಿಸಿ ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಹೆಮ್ಮೆಯ ಕನ್ನಡಿಗ ಕಾರ್ಯಕ್ರಮದಡಿ ಅವರನ್ನು ಮತ್ತು ಸಂಕಲನಕಾರ ಮುತ್ತುರಾಜ್ ಟಿ, ಸಿನಿ ಛಾಯಾಗ್ರಾಹಕ, ಸಹಾಯಕ ನಿರ್ದೇಶಕ ಶಶಿಧರ ದೇವಾಡಿಗ ಅವರನ್ನೂ ಸನ್ಮಾನಿಸಿಸುತ್ತಿರುವುದು ನಮಗೆ ಹರ್ಷ ಎನಿಸುತ್ತದೆ ಎಂದರು. ಹಿರಿಯ ಪತ್ರಕರ್ತ ಡಾ.ವೀರೇಶ್ ಹಂಡಿಗಿ ಸನ್ಮಾನಿತರ ಕುರಿತು ಮಾತನಾಡಿದರು. ವಿಶ್ರಾಂತ ಪ್ರಾಚಾರ್ಯ ಡಾ. ಪ್ರಭು ಗಂಜಿಹಾಳ ಅಧ್ಯಕ್ಷತೆ ವಹಿಸಿದ್ದರು. ರವೀಂದ್ರ ರಾಮದುರ್ಗಕರ್ ಸ್ವಾಗತಿಸಿ, ನಿರೂಪಿಸಿದರು. ಬಸವರಾಜ ಕರ್ಕಿ ವಂದಿಸಿದರು. ಡಾ.ಪ್ರಭು ಗಂಜಿಹಾಳ

# ಆಸ್ಪತ್ರೆಗೆ ಬರುವ ಎಲ್ಲರಿಗೂ ಕನ್ನಡ ಭಾಷೆಯ ಮೇಲೆ ಗೌರವ ಮೂಡಿಸುವ ಕಾರ್ಯದೊಂದಿಗೆ ಎಂದಿನಂತೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಜನತೆಗೆ ಒದಗಿಸೋಣ:ಡಾ ನಂದಿತಾ ಎಮ್ ಎನ್.

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಅರಳು ಹುರಿದಂತೆ ಮಾತನಾಡಬಹುದಾದ ಸುಂದರ ಭಾಷೆಯಾದ ಕನ್ನಡವನ್ನು ಭಾಷೆಯನ್ನು, ಚಿಕಿತ್ಸೆಗಾಗಿ ಆಗಮಿಸುವ ಕನ್ನಡ ಭಾಷೆ ಗೊತ್ತಿರದವರಿಗೂ ಭಾಷೆಯ ಮೇಲೆ ಅಭಿಮಾನ ಬರುವ ರೀತಿಯಲ್ಲಿ ನಡೆದುಕೊಳ್ಳೋಣ. ಮತ್ತು ನಾವೆಲ್ಲರೂ ಆರೋಗ್ಯ ಇಲಾಖೆಯ ಸೇವೆ, ಸೌಲಭ್ಯಗಳನ್ನು ಜನತೆಗೆ ನಿಸ್ವಾರ್ಥದಿಂದ ಒದಗಿಸೋಣವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.**



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ 71 ನೆರಯ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ತಾಯಿ ಭುವನೇಶ್ವರಿಗೆ ಪೂಜೆ ನೇರವೆರಿಸಿ ಮಾತನಾಡುತ್ತಾ, ಸಾವಿರಾರು ವರ್ಷಗಳ ಇತಿಹಾಸ ಇರುವ ಕನ್ನಡ ಭಾಷೆ, ರಾಷ್ಟ್ರದ ಶಾಸ್ತ್ರಿಯ ಭಾಷೆಗಳಲ್ಲಿ ಒಂದಾಗಿದೆ. ಕನ್ನಡ ಬಾರದ ಅನ್ಯ ಭಾಷಿಕ-ರಿಗೂ ಸಹ ಅವರ ಭಾಷೆಗೆ ಗೌರವ ನೀಡಿ ಕನ್ನಡ ಭಾಷೆಯನ್ನು ಕಲಿಸಬೇಕು ಎಂದರು.

ಆರೋಗ್ಯ ಸೇವೆ ನೀಡುವ ಇಲಾಖೆಯಲ್ಲಿರುವ ನಾವೆಲ್ಲರೂ ಗ್ರಾಮೀಣ, ನಗರ ಪ್ರದೇಶಗಳಲ್ಲಿ ಸರಕಾರಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಆಗಮಿಸುವ ಜನತೆಗೆ ಸೌಜನ್ಯಯುತವಾಗಿ ಸ್ಪಂದಿಸಿ, ಈಗ ನೀಡುತ್ತಿರುವ ಗುಣಮಟ್ಟದ ತಾಯಿ ಮಗುವಿನ ಸೇವೆ ಸೇರಿದಂತೆ ಎಲ್ಲ ಸೇವೆಗಳನ್ನು ಇನ್ನು ಉತ್ತಮಗೊಳಿಸಿ, ಸಮರ್ಪಣಾ ಭಾವದಿಂದ ಕರ್ತವ್ಯ ನಿರ್ವಹಿಸಿ ಮಾನವೀಯತೆಯಿಂದ ಕೂಡಿದ ಸುಂದರ ಸಮಾಜದ ನಿರ್ಮಾಣಕ್ಕೆ ನಾವೆಲ್ಲರೂ ಕೈ ಜೋಡಿಸೋಣ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ಮಹಮ್ಮದ್ ಶಾಕೀರ್, ಸೇರಿದಂತೆ ಎಲ್ಲ ವಿಭಾಗಗಳ ಸಿಬ್ಬಂದಿಯವರು ಸೇ-ರಿದಂತೆ ಇತರರು ಉಪಸ್ಥಿತರಿದ್ದರು.

# ಮುರುಸು ಚಂಡಮಾರುತದ ಎಫೆಕ್ಟ್ : ರಾಜ್ಯದಲ್ಲಿ ನಾಲ್ಕು ದಿನ ಮಳೆ ಸಾಧ್ಯತೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಅರ್ನಬ್ ಚಂಡಮಾರುತದ ಬೆನ್ನಲ್ಲೇ ಬಂಗಾಳಕೊಲ್ಲಿಯಲ್ಲಿ ಮುರುಸು ಎಂಬ ಮತ್ತೊಂದು ಚಂಡಮಾರುತ ಉಂಟಾಗಿದ್ದು, ಇದರ ಪರಿಣಾಮ ರಾಜ್ಯದಲ್ಲಿ ಇನ್ನು ನಾಲ್ಕು ದಿನಗಳ ಕಾಲ ಮಳೆಯಾಗುವ ಮುನ್ಸೂಚನೆಗಳಿವೆ.ನಕ್ಷೆಗಳನ್ನು ನೋಡಿ**



ಇಂದಿನಿಂದ ಐದು ದಿನಗಳ ಕಾಲ ರಾಜ್ಯದಲ್ಲಿ ಮೋಡ ಕವಿದ ವಾತಾವರಣವಿದ್ದು ಸಂಜೆ ಮತ್ತು ರಾತ್ರಿ ವೇಳೆ ಹಲವೆಡೆ ಮಳೆಯಾಗುವ ಸಾಧ್ಯತೆಗಳಿವೆ.ಚಂಡಮಾರುತದ ಪರಿಣಾಮ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಭಾರೀ ಮಳೆಯಾಗಲಿದ್ದು, ಕರ್ನಾಟಕದಲ್ಲಿ ಸಾಧಾರಣ ಮಳೆಯಾಗುವ ಮುನ್ಸೂಚನೆಗಳಿವೆ. ಇಂದು ಮಧ್ಯರಾತ್ರಿ ವೇಳೆಗೆ ಆಂಧ್ರಪ್ರದೇಶದ ಕರಾವಳಿಯನ್ನು ಚಂಡಮಾರುತ ತಲುಪುವ ನಿರೀಕ್ಷೆಯಿದ್ದು, ಅದರ ವೇಗ ಗಂಟೆಗೆ 100 ಕಿ.ಮೀ. ದಾಟುವ ನಿರೀಕ್ಷೆ ಇರುವುದರಿಂದ ಕರ್ನಾಟಕದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ್ಗೆ ಬಲವಾದ ಮೇಲ್ಮೈ ಗಾಳಿ ಬೀಸಲಿದೆ. ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಒಂದೆರೆಡು ಕಡೆ ಭಾರೀ ಮಳೆಯಾಗುವ ಮುನ್ಸೂಚನೆಗಳಿವೆ. ಕರಾವಳಿ ದಕ್ಷಿಣ ಒಳನಾಡಿನಲ್ಲಿ ಇಂದು ಮತ್ತು ನಾಳೆ ಮಳೆ ಪ್ರಮಾಣ ಹೆಚ್ಚಾಗುವ ಮುನ್ಸೂಚನೆಗಳಿವೆ.

ನ.3 ಮತ್ತು 4 ರಂದು ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕ ಹಲವೆಡೆ ಉತ್ತಮ ಮಳೆಯಾಗುವ ಮುನ್ಸೂಚನೆಗಳಿವೆ. ರಾಜಧಾನಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿರಲಿದ್ದು, ಸಂಜೆ ಮತ್ತು ರಾತ್ರಿ ಗುಡುಗು, ಮಿಂಚಿನಿಂದ ಕೂಡಿದ ಮಳೆಯಾಗುವ ಲಕ್ಷಣಗಳಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.ನಕ್ಷೆಗಳನ್ನು ನೋಡಿ

# ಮಲ್ಲಟ ಗ್ರಾಮದ ಶಾಲೆ, ಅಂಗನವಾಡಿಗಳ ಅಭಿವೃದ್ಧಿಗೆ ಗ್ರಹಣ: ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ವಿರುದ್ಧ ಗ್ರಾಮಸ್ಥರ ಆಕ್ರೋಶ!

**ಶೌಚಾಲಯ, ಕುಡಿಯುವ ನೀರು, ಕಿಟಕಿ?ಬಾಗಿಲುಗಳ ಕೊರತೆ; ವಿದ್ಯಾರ್ಥಿಗಳು ಬಯಲು ಶೌಚಕ್ಕೆ ಹೋಗುವ ದುಸ್ಥಿತಿ. ಎನ್‌ಜಿಒ ಸಂಸ್ಥೆಗಳು ನೆರವಾದರೂ ಮೂಲಸೌಕರ್ಯ ಕಲ್ಪಿಸುವಲ್ಲಿ ಸ್ಥಳೀಯ ಆಡಳಿತದ ನಿರ್ಲಕ್ಷ್ಯವೇಕೆ?**

❑ ನೈಜ್ಯ ದೆಸೆ ನ್ಯೂಸ್

**ಸಿರವಾರ: ಸಿರವಾರ ತಾಲೂಕಿನ ಮಲ್ಲಟ ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಎದುರಾಗಿದ್ದು, ವಿದ್ಯಾರ್ಥಿಗಳು ಮತ್ತು ಪುಟ್ಟ ಮಕ್ಕಳಿಗೆ ತೊಂದರೆಯಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.**





ಗ್ರಾಮದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ ಮಕ್ಕಳು ಬಯಲು ಶೌಚಕ್ಕೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲಾ ಕಟ್ಟಡಗಳಲ್ಲಿ ಅಗತ್ಯವಾದ ಕಿಟಕಿ ಮತ್ತು ಬಾಗಿಲುಗಳ ಕೊರತೆಯೂ ಕಂಡುಬರುತ್ತಿದೆ. ಇನ್ನು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ಆತಂಕಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳ ಕುರಿತು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮಲ್ಲಟ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಸೂಕ್ತ ಸ್ಪಂದನೆ ದೊರೆತಿಲ್ಲ ಎನ್ನಲಾಗಿದೆ. ಗ್ರಾಮ ಪಂಚಾಯಿತಿಯಲ್ಲಿ ಅನುದಾನವಿಲ್ಲ ಎಂಬ ಉತ್ತರ ನೀಡಲಾಗುತ್ತಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎನ್‌ಜಿಒ ಸಂಸ್ಥೆಗಳಿಂದ ಶಾಲೆಗಳಿಗೆ ನೆರವು ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸರ್ಕಾರಿ ಶಾಲೆಗಳ ಬಗ್ಗೆ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ಅಇೂಖಐಆ ಖಐಉಊಖಿಖ ಂಓಆ ಜಔಗ (ಅಖಜ) ಮತ್ತು ಔಖಂಅಐಇ ಸಂಸ್ಥೆಗಳ ಸಹಯೋಗದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳಿಗೆ ನೆರವು ನೀಡಲಾಗಿದೆ. ಸಂಸ್ಥೆಗಳ ವತಿಯಿಂದ ಸುಮಾರು ?7 ಲಕ್ಷ ಮೌಲ್ಯದ ವಿವಿಧ ಶೈಕ್ಷಣಿಕ ಸಾಮಗ್ರಿಗಳು, ಲ್ಯಾಪ್‌ಟಾಪ್‌ಗಳು ಹಾಗೂ ಶಾಲೆಗೆ ಅಗತ್ಯವಾದ ಉಪಕರಣಗಳನ್ನು ಒದಗಿಸಲಾಗಿದೆ ಎಂದು ತಿಳಿದುಬಂದಿದೆ.

ಅದೇ ರೀತಿ ಒಂದು ಅಂಗನವಾಡಿ ಕೇಂದ್ರದ ಕಟ್ಟಡಕ್ಕೆ ಬಣ್ಣ ಹಚ್ಚುವುದು, ಚಿತ್ರಕಲೆ ಮಾಡುವುದು ಹಾಗೂ ಮಕ್ಕಳಿಗೆ ಆಟಿಕೆ ಸಾಮಗ್ರಿಗಳನ್ನು ಒದಗಿಸುವ ಮೂಲಕ ಸಂಸ್ಥೆಗಳು ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಿವೆ. ಖಾಸಗಿ ಸ್ವಯಂಸೇವಾ ಸಂಸ್ಥೆಗಳು ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳ ಅಭಿವೃದ್ಧಿಗೆ ಮುಂದೆ ಬಂದು ನೆರವು ನೀಡುತ್ತಿರುವಾಗ, ಸ್ಥಳೀಯ ಆಡಳಿತದಿಂದ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ವಿಳಂಬವಾಗುತ್ತಿರುವುದೇಕೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಮಕ್ಕಳ ಮೂಲಭೂತ ಸೌಕರ್ಯ ಕಲ್ಪಿಸುವುದು ಆಡಳಿತದ ಜವಾಬ್ದಾರಿಯಲ್ಲವೇ?

ಸರ್ಕಾರವು ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳು ಹಾಗೂ ಅನುದಾನಗಳನ್ನು ಒದಗಿಸುತ್ತಿದೆ. ಇಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಅಧಿಕಾರಿಗಳು ಶಾಲೆ ಹಾಗೂ ಅಂಗನವಾಡಿಗಳ ಸಮಸ್ಯೆಗಳಿಗೆ ಆದ್ಯತೆ ನೀಡಿ, ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ. ಮಕ್ಕಳಿಗೆ ಸ್ವಚ್ಛ ಶೌಚಾಲಯ, ಶುದ್ಧ ಕುಡಿಯುವ ನೀರು, ಸುರಕ್ಷಿತ ಶಾಲಾ ಕಟ್ಟಡ ಹಾಗೂ ಉತ್ತಮ ಕಲಿಕಾ ವಾತಾವರಣ ಕಲ್ಪಿಸುವುದು ಅತ್ಯಂತ ಮುಖ್ಯವಾಗಿದೆ. ಆದರೆ ಮಲ್ಲಟ ಗ್ರಾಮದ ಶಾಲೆ ಮತ್ತು ಅಂಗನವಾಡಿಗಳಲ್ಲಿನ ಸಮಸ್ಯೆಗಳು ಇನ್ನೂ ಬಗೆಹರಿಯದಿರುವುದು ಆಡಳಿತದ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿದೆ.

ಗ್ರಾಮಸ್ಥರ ಒತ್ತಾಯವೇನು?

ಮಲ್ಲಟ ಗ್ರಾಮದ ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಅಧಿಕಾರಿಗಳು ಕೂಡಲೇ ಪರಿಶೀಲಿಸಬೇಕು. ಅಗತ್ಯವಿರುವ ಶೌಚಾಲಯಗಳ ನಿರ್ಮಾಣ ಮತ್ತು ದುರಸ್ತಿ, ಕಿಟಕಿ?ಬಾಗಿಲುಗಳ ಅಳವಡಿಕೆ, ಕುಡಿಯುವ ನೀರಿನ ವ್ಯವಸ್ಥೆ ಸೇ-ರಿದಂತೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಯಾವುದೇ ತೊಂದರೆಯಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ಹಲವು ಪ್ರಯತ್ನಗಳನ್ನು ಮಾಡುತ್ತಿರುವಾಗ, ಸ್ಥಳೀಯ ಮಟ್ಟದಲ್ಲಿ ಮೂಲಸೌಕರ್ಯಗಳ ಕೊರತೆ ಮುಂದುವರಿದರೆ ಪೋಷಕರಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ನಿರಾಸಕ್ತಿ ಮೂಡುವ ಸಾಧ್ಯತೆಯಿದೆ. ಆದ್ದರಿಂದ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ಮಲ್ಲಟ ಗ್ರಾಮದ ಶಾಲೆ ಮತ್ತು ಅಂಗನವಾಡಿಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದೆ ಎಂಬುದು ಗ್ರಾಮಸ್ಥರ ಆಗ್ರಹವಾಗಿದೆ.

## ವಚನ ದರ್ಶನ

ಶೂಲದ ಮೇಲಣ ವಿಭೋಗವೇನಾದಡೇನೊ?ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!ತನ್ನಾತ್ಮ ತನಗೆ ಹಗೆಯಾದ ಮತ್ತೆಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ.

ಶೂಲದ ಮೇಲಣ ವಿಭೋಗವೇನಾದಡೇನೊ" ಎಂಬುದು ೧೨ನೆಯ ಶತಮಾನದ ಪ್ರಸಿದ್ಧ ಸಮಾಜ ಸುಧಾರಕ ಹಾಗೂ ಶಿವಶರಣ ಜಗಜ್ಯೋತಿ ಬಸವಣ್ಣನವರ ಒಂದು ಅತ್ಯಂತ ಅರ್ಥಗರ್ಭಿತ ವಚನವಾಗಿದೆ. ಈ ವಚನವು ಲೌಕಿಕ ಸುಖದ ನಶ್ವರತೆ ಮತ್ತು ಆತ್ಮಸಾಕ್ಷಿಯ ಮಹತ್ವವನ್ನು ಮಾರ್ಮಿಕವಾಗಿ ವಿವರಿಸುತ್ತದೆ.

ಲೌಕಿಕ ಸುಖದ ಭ್ರಮೆ ಮರಣದಂಡನೆ ವಿಧಿಸಿ ಶೂಲಕ್ಕೇರಿಸಿದ ವ್ಯಕ್ತಿಗೆ ರಾಜಭೋಗ, ಸುಗಂಧ ದ್ರವ್ಯಗಳು ಅಥವಾ ಉತ್ತಮ ಸತ್ಕಾರಗಳನ್ನು ನೀಡಿದರೆ ಅದರಿಂದ ಏನು ಪ್ರಯೋಜನ? ಸಾವು ನಿಶ್ಚಿತವಾಗಿರುವಾಗ ಆ ಕ್ಷಣಿಕ ಭೋಗಗಳು ಹೇಗೆ ವ್ಯರ್ಥವೋ, ಹಾಗೆಯೇ ಈ ಲೌಕಿಕ ಜಗತ್ತಿನ ಮಾಯಾ ಸುಖಗಳೂ ಸಹ ಕ್ಷಣಿಕವಾಗಿವೆ.

ಸಂಸಾರದ ನಶ್ವರತೆ
ನಾನಾ ವರ್ಣಗಳಿಂದ (ಬಣ್ಣಗಳಿಂದ) ಕೂಡಿರುವ ಈ ಸಂಸಾರವು ಹಾವಾಡಿಗ ಮತ್ತು ಹಾವಿನ ಸ್ನೇಹದ ಹಾಗೆ. ಹಾವಾಡಿಗನು ಹಾವನ್ನು ಎಷ್ಟು ಪ್ರೀತಿಯಿಂದ ಸಾಕಿದರೂ, ಅದು ಯಾವಾಗ ಕಚ್ಚುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಹಾಗೆಯೇ ಈ ಪ್ರಾಪಂಚಿಕ ಜೀವನವೂ ನಂಬಿಕೆಗೆ ಅರ್ಹವಲ್ಲ.

ಆತ್ಮಸಾಕ್ಷಿಯ ಜಾಗೃತಿ
ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಆತ್ಮವೇ ಶತ್ರುವಾದ ಮೇಲೆ (ಅಂದರೆ ಅವನ ಆತ್ಮಸಾಕ್ಷಿಯೇ ಅವನ ತಪ್ಪುಗಳನ್ನು ಕಂಡು ಚುಚ್ಚುತ್ತಿರುವಾಗ), ಅವನು ಲೋಕದ ಎದುರು ಎಷ್ಟೇ ಜಾಣ್ಮೆ, ಜ್ಞಾನ ಅಥವಾ ಚಾತುರ್ಯವನ್ನು ಪ್ರದರ್ಶಿಸಿದರೂ ಅದಕ್ಕೆ ಯಾವ ಬೆಲೆಯೂ ಇರುವುದಿಲ್ಲ ಎಂಬುವುದು ಈ ವಚನದ ತಾತ್ಪರ್ಯ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ–ಸಿಂಧನೂರು. 998094144

# ಚಿನ್ನದ ಹುಡುಗಿ ಪೂರ್ವಿಕಾ ಸಾಧನೆಯ ಸಿರಿ:

## ಯೋಗ ಪಥದಲ್ಲಿ ಕಂಪ್ಲಿ ಪ್ರತಿಭೆಯ ಜೈತ್ರಯಾತ್ರೆ, ರಾಷ್ಟ್ರಮಟ್ಟಕ್ಕೆ ಭರ್ಜರಿ ಆಯ್ಕೆ

ನೈಜ್ಯ ದೆಸೆ ವಿಶೇಷ

ಜಿಲಾನಸಾಬ್ ಬಡಿಗೇರ್

ಕಂಪ್ಲಿ: ಮನಸ್ಸಿನ ಏಕಾಗ್ರತೆ, ದೇಹದ ದೃಢತೆ ಹಾಗೂ ನಿರಂತರ ಸಾಧನೆಯ ಛಲವಿದ್ದರೆ ಎಂತಹ ಶಿಖರವನ್ನಾದರೂ ಏರಬಹುದು ಎಂಬುದನ್ನು ಕಂಪ್ಲಿ ತಾಲೂಕಿನ ಹೆಮ್ಮೆಯ ಯೋಗ ಕುವರಿ, ಕುಮಾರಿ ಪೂರ್ವಿಕಾ ಜೆ. ಎಂ. ಅಕ್ಷರಶಃ ಸಾಬೀತುಪಡಿಸಿದ್ದಾರೆ. ಬೀದರ್ ಜಿಲ್ಲೆಯ ಎಸ್.ಆರ್.ಪಿ.ಯು. ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ರಾಜ್ಯಮಟ್ಟದ ಯೋಗ ಸ್ಪರ್ಧೆಯಲ್ಲಿ ಎರಡು ವಿಭಾಗಗಳಲ್ಲಿ ವೀರಾವೇಶದ ಪ್ರದರ್ಶನ ನೀಡಿ, 'ಎರಡು ಚಿನ್ನದ ಪದಕ'ಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ರಾಷ್ಟ್ರಮಟ್ಟದ ಮಹಾ ವೇದಿಕೆಗೆ ಗರ್ಜಿಸುತ್ತಾ ಹೆಜ್ಜೆ ಇಟ್ಟಿದ್ದಾರೆ.
ಇವರು ಕಂಪ್ಲಿ ಪಟ್ಟಣದ ನಿವಾಸಿಗಳಾದ ಜೆ. ಎಂ. ತಿಪ್ಪೇಸ್ವಾಮಿ ಹಾಗೂ ಜೆ. ಎಂ. ಅಮೃತಾ ದಂಪತಿಯ ಪುತ್ರಿಯಾಗಿದ್ದು, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 94% ಶೇಕಡಾವಾರು ಫಲಿತಾಂಶ ಪಡೆದು, ಪ್ರಸ್ತುತ ಮೂಡುಬಿದ್ರೆಯ ಆಳ್ವಾಸ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾಳೆ. ಕಂಪ್ಲಿ ಪಟ್ಟಣದ ಕುವರಿಯ ಹಿಮಾಲಯ ಸದೃಶ ಸಾಧನೆ ಇಡೀ ಬಳ್ಳಾರಿ ಜಿಲ್ಲೆ ಹಾಗೂ ಕರ್ನಾಟಕವೇ ತಿರುಗಿ ನೋಡುವಂತೆ ಮಾಡಿದೆ.
ಖಚಿತ ಗುರಿ, ಅಚಲ ನಂಬಿಕೆ ? ಯುವ ಪೀಳಿಗೆಗೆ ಸ್ಫೂರ್ತಿಯ ಸೆಲೆ:
ಯಾವುದೇ ದೊಡ್ಡ ಸಾಧನೆಗೆ ಸೌಲಭ್ಯಗಳಿಗಿಂತ ಹೆಚ್ಚಾಗಿ ಒಳಗಣ್ಣಿನ ಕನಸು ಮತ್ತು ಮುರಿಯದ ಸಂಕಲ್ಪ ಮುಖ್ಯ ಎಂಬುದಕ್ಕೆ ಪೂರ್ವಿಕಾ ಜೆ. ಎಂ. ಅವರೇ ಸಾಕ್ಷಿ. ನಿತ್ಯದ ಕಠಿಣ ಪರಿಶ್ರಮ, ಬೆವರು ಹರಿಸುವ ಜಪ ಹಾಗೂ ಯೋಗದ ಮೇಲಿನ ಅಚಲ ಭಕ್ತಿಯೇ ಇಂದು ಅವರನ್ನು ರಾಜ್ಯಮಟ್ಟದ ಸಿಂಹಾಸನದಲ್ಲಿ ಕೂರಿಸಿದೆ. ಸೋಲು–ಗೆಲುವುಗಳ ಲೆಕ್ಕಾಚಾರ ಬದಿಗಿಟ್ಟು ಕೇವಲ ಪರಿಶ್ರಮವನ್ನೇ ಉಸಿರಾಗಿಸಿಕೊಂಡರೆ ಯಶಸ್ಸು ನಮ್ಮ ಪಾದದಡಿಗೆ ಬರುತ್ತದೆ ಎಂಬುದನ್ನು ಪೂರ್ವಿಕಾ ಜೆ. ಎಂ.ಇಂದಿನ ಯುವ ಪೀಳಿಗೆಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಇವರ ಈ ಯಶೋಗಾಥೆ ಗ್ರಾಮೀಣ ಭಾಗದ ಸಾವಿರಾರು ಉದಯೋನ್ಮುಖ ಪ್ರತಿಭೆಗಳಿಗೆ ದಾರಿದೀಪವಾಗಿದೆ.
ಪೂರ್ವಿಕಾ ಅವರ ಈ ಐತಿಹಾಸಿಕ ಸಾಧನೆ ಕಂಪ್ಲಿ ಪಟ್ಟಣದಲ್ಲಿ ಹಬ್ಬದ ಸಡಗರ ಮೂಡಿಸಿದೆ. ಪೂರ್ವಿಕಾ ಅವರ ಕುಟುಂಬ ವರ್ಗದ ಶಕ್ತಿಸ್ತಂಭ




ಹಿರಿಯರಾದ ಜೆ. ಎಂ. ಸಿದ್ದಯ್ಯ ಸ್ವಾಮಿ, ನಿರ್ಮಲ ಕೊಡಲಿಕರ್, ಹಾಗೂ ಅವರ ಇಡೀ ಕುಟುಂಬ ವರ್ಗದವರು ಮತ್ತು ಕಂಪ್ಲಿ ಪಟ್ಟಣದ ಪ್ರಮುಖ ಸಂಘಟನೆಗಳ ಪದಾಧಿಕಾರಿಗಳು ಸಾಧಕಿಯನ್ನು ಅತ್ಯಂತ ಸಡಗರದಿಂದ ಸ್ವಾಗತಿಸಿ, ಸಿಹಿ ಹಂಚಿ ಹೃತ್ಪೂರ್ವಕವಾಗಿ ಸನ್ಮಾನಿಸಿದರು.
"ಅಖಂಡ ಭಾರತದ ನಕ್ಷೆಯಲ್ಲಿ ಕಂಪ್ಲಿಯ ಹೆಸರು ಬೆಳಗಲಿ":
"ಪೂರ್ವಿಕಾ ಕೇವಲ ನಮ್ಮ ಕುಟುಂಬದ ಹೆಮ್ಮೆಯಲ್ಲ, ಇಡೀ ನಾಡಿನ ಹೆಮ್ಮೆಯ ಸಂಕೇತ. ಆಕೆಯ ಈ ಚಿನ್ನದ ಸಾಧನೆ ಮುಂಬರುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲೂ ಮುಂದುವರಿದು, ದೇಶದ ನಕ್ಷೆಯಲ್ಲಿ ಕಂಪ್ಲಿಯ ಹೆಸರು ಸುವರ್ಣಾಕ್ಷರಗಳಲ್ಲಿ ಮೂಡಿಬರಲಿ, ಆಕೆ ಭಾರತದ ಕೀರ್ತಿಪತಾಕೆಯನ್ನು ಹಾರಿಸಲಿ" ಎಂದು ಜೆ. ಎಂ. ಸಿದ್ದಯ್ಯ ಸ್ವಾಮಿ ಹಾಗೂ ಪಟ್ಟಣದ ಪ್ರಮುಖ ಸಂಘಟನೆಗಳ ಗಣ್ಯರು ರೋಮಾಂಚನದಿಂದ ಆಶೀರ್ವದಿಸಿ, ಶುಭ ಹಾರೈಸಿದ್ದಾರೆ.
ಕನಸುಗಳನ್ನು ಕಾಣುವ ಧೈರ್ಯ ನಿಮಗಿದ್ದರೆ, ಅದನ್ನು ನನಸು ಮಾಡುವ ಶಕ್ತಿ ನಿಮ್ಮ ಕಠಿಣ ಪರಿಶ್ರಮಕ್ಕಿರುತ್ತದೆ. ಪೂರ್ವಿಕಾ ಅವರ ಈ ಹಾದಿ ನಮಗೆ ಕಲಿಸುವುದು ಒಂದೇ ? ಪ್ರಯತ್ನ ನಿರಂತರವಾಗಿರಲಿ, ಯಶಸ್ಸು ನಿಶ್ಚಿತ.

## ಇದೇ ನವೆಂಬರ್ 29ರಂದು ಚಾಮರಾಜನಗರ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ನಡೆಯಲಿರುವ ಮಾನ್ಯ ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್ ಹಾಗೂ ಡಾ. ಶ್ರೀನಿಧಿ ಅವರ ಆರತಕ್ಷತೆ ಮತ್ತು ಬೀಗರ ಔತಣಕೂಟಕ್ಕೆ ಕ್ಷೇತ್ರದ ಜನತೆಗೆ ಆತ್ಮೀಯವಾಗಿ ಆಹ್ವಾನಿಸಿದ ಮದುಮಗ ಶಾಸಕ ದರ್ಶನ್ ಧ್ರುವನಾರಾಯಣ್

ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಇದೇ ನವೆಂಬರ್ 29ರಂದು ಚಾಮರಾಜನಗರ ತಾಲೂಕಿನ ತಮ್ಮ ಸ್ವಗ್ರಾಮ ಹೆಗ್ಗವಾಡಿ ಗ್ರಾಮದಲ್ಲಿ ನಡೆಯಲಿರುವ ಶಾಸಕರಾದ ದರ್ಶನ್ ಧ್ರುವನಾರಾಯಣ್ ಹಾಗೂ ಡಾ. ಶ್ರೀನಿಧಿ ಅವರ ಆರತಕ್ಷತೆ ಮತ್ತು ಬೀಗರ ಔತಣಕೂಟಕ್ಕೆ ಕ್ಷೇತ್ರದ ಜನತೆಗೆ ಆತ್ಮೀಯವಾಗಿ ಆಹ್ವಾನಿಸಿದ ಮದುಮಗ ಶಾಸಕ ದರ್ಶನ್ ಧ್ರುವನಾರಾಯಣ್**

ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ತಮ್ಮ ಕ್ಷೇತ್ರಕ್ಕೆ ಸೇರುವವಿವಿಧ ಗ್ರಾಮಗಳಾದ ಕೊತ್ತನಹಳ್ಳಿ, ಹೆಡಿಯಾಲ, ಬಂಕಹಳ್ಳಿ, ಇಂದಿರಾನಗರ, ಅದನೂರು, ವಡೆಯನಪುರ, ವೆಂಕಟಚಲಪುರ, ಚಿಲ್ಕಹಳ್ಳಿ, ಕಂದೇಗಾಲ, ಹೊಸ ಕಡಜಟ್ಟಿ, ಅರಿಯೂರು, ಜಾಲಹಳ್ಳಿ, ಹಳೆ ಕಡಜಟ್ಟಿ, ಮೂಡಲಹುಂಡಿ, ಮಡಿಕೆಹುಂಡಿ, ಹಾಡ್ಯ, ಹಾಡ್ಯದಹುಂಡಿ, ಮಾಡುವಿನಹಳ್ಳಿ,



ಹೊಸವೀಡುಹುಂಡಿ, ಹೊಸವೀಡು, ಅಂಜನಾಪುರ, ಈರೇಗೌಡನಹುಂಡಿ, ಮಹದೇವನಗರ, ನಾಗಣಪುರ ಕಾಲೋನಿ, ನಾಗಣಪುರ, ಬಳ್ಳೂರುಹುಂಡಿ ಹಾಗೂ ಹಂಚಿಪುರ ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮದ ಹಿರಿಯರು ಹಾಗೂ ಯಜಮಾನ–ರಿಗೆ ಆಮಂತ್ರಣ ಪತ್ರಿಕೆ ನೀಡಿ, ಗ್ರಾಮಸ್ಥರೆಲ್ಲರೂ ಕುಟುಂಬ ಸಮೇತರಾಗಿ ಆಗಮಿಸಿ ಶುಭ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಆತ್ಮೀಯವಾಗಿ ಆಹ್ವಾನಿಸಿದ ದರ್ಶನ್ ಧ್ರುವ ನಾರಾಯಣ್ ರವರು
ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರ ನಿಶ್ಚಿತಾರ್ಥ ಸಮಾರಂಭವು ಕೃಷ್ಣರಾಜಪೇಟೆ ಪಟ್ಟಣದ ಹೊರ ವಲಯದ ಚನ್ನರಾಯಪಟ್ಟಣ ರಸ್ತೆಯಲ್ಲಿರುವ ರಾಯಲ್ ಕಂಫರ್ಟ್ ಹೋಟೆಲ್ ಸಭಾಂಗಣದಲ್ಲಿ ಇಂದು ಅದ್ದೂರಿಯಾಗಿ ನಡೆಯಿತು. ಕೆ.ಆರ್.ಪೇಟೆ ಪಟ್ಟಣದ ಶಿಕ್ಷಕರ ಭವನದ ಪಕ್ಕದಲ್ಲಿರುವ ಬಿಜಿಎಸ್ ವಾಣಿಜ್ಯ ಸಂಕಿರಣದಲ್ಲಿ ಸಂಜೀವಿನಿ ಕ್ಲಿನಿಕ್ ನಡೆಸುತ್ತಿರುವ ಡಾ. ಆರ್.ರಾಜೇಶ್ವರಿ ರವಿಕುಮಾರ್ ಅವರ ಸುಪುತ್ರಿ ಡಾ.ಶ್ರೀನಿಧಿ ಅವರೊಂದಿಗೆ ಪ್ರೇಮಾಂಕುರವಾಗಿ ಎರಡೂ ಕುಟುಂಬಗಳ ಸಮ್ಮತಿಯೊಂದಿಗೆ ವಿವಾಹ ನಿಶ್ಚಿತಾರ್ಥ ಸಮಾರಂಭ ಇಂದು ನಡೆಯಿತು. ನವಜೀವನದ ಹೊಸ ಪಯಣಕ್ಕೆ ಕಾಲಿಡುತ್ತಿರುವ ನವ ಜೋಡಿಗೆ ಶಾಸಕ ಹೆಚ್.ಟಿ.ಮಂಜು ಶುಭಾಶಯಗಳನ್ನು ತಿಳಿಸಿದರು. ಶಾಸಕ ದರ್ಶನ್ ಹಾಗೂ ಡಾ.ಶ್ರೀನಿಧಿ ಅವರ ಮುಂದಿನ ವಿವಾಹ ಜೀವನವು ಸುಖಮಯ ವಾಗಿರಲಿ ಎಂದು ತಾಲೂಕಿನ ಜನರು ಶುಭ ಹಾರೈಸಿದ್ದಾರೆ.

## ತಾಂಡವಪುರ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ ನವಂಬರ್ 2 ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಂಡವಪುರ ಗ್ರಾಮ ಪಂಚಾಯತಿ ಕಚೇ–ರಿಯಲ್ಲಿ 71ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ಹಾಗೂ ಕಾರ್ಯದರ್ಶಿ ಕೆಕೆ ಮುರಯ್ಯನವರು ತಾಯಿ ಭುವನೇಶ್ವರಿ ಕನ್ನಡಾಂಬೆ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ವಂದಿಸಿ ಗೌರವ ಸಲ್ಲಿಸಿದರು**



ಗೌರವ ಸಲ್ಲಿಸಿ ಮಾತನಾಡಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ರವರು ನಾಡಿನ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯ ಕೋರಿ ನಮ್ಮ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವವನ್ನ ಆಚರಿಸಿ ಸಿಹಿ ವಿತ–ರಿಸಲಾಯಿತು ಎಂದು ತಿಳಿಸಿದರು ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ಕಾರ್ಯದರ್ಶಿ ಕೆಕ ಮರಯ್ಯ ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗವರಾದ ನಂಜಪ್ಪ ಶ್ರೀಕಂಠ ಶಾಂತ ಗ್ರಂಥಾಲಯದ ಚಂದ್ರು ಪೌರಕಾರ್ಮಿಕ ಸಂಘದ ಮುರುಗೇಶ್ ಹಾಗೂ ಪೌರಕಾರ್ಮಿಕರು ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು

# ಗೃಹ ಸಚಿವರ ಬಳಿ ಟ್ರೇಲರ್, ನನ್ನ ಬಳಿ ಪಿಕ್ಚರ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ವಿರುದ್ಧ ಮುಗಿಬಿದ್ದಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಲು ಪೊಲೀಸರು ತರಾತುರಿಯಲ್ಲಿ ತಮ್ಮ ಮೇಲೆ ಕಟ್ಟುಕತೆ ಹೆಣೆಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದು, ಟ್ರೇಲರ್ ಮಾತ್ರ ಗೃಹ ಸಚಿವರ ಬಳಿ ಇದೆ, ಆದರೆ ನನ್ನ ಬಳಿ ಫುಲ್ ಪಿಕ್ಚರ್ ಇದೆ ಎಂದು ತಿರುಗೇಟು ನೀಡಿದ್ದಾರೆ. ನಕ್ಷೆಗಳನ್ನುನೋಡಿ**

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ತಮ್ಮ ಹೆಸರು ತಳಕು ಹಾಕಲು ಯತ್ನಿಸಲಾಗುತ್ತಿದೆ ಎಂದು ತೀವ್ರ ವಾಗ್ದಾಳಿ ನಡೆಸಿದರು. ಬೆಂಗಳೂರು ಪೊಲೀಸ್ ಕಮಿಷನರ್ ಸೀಮಂತ್



ಕುಮಾರ್ ಸಿಂಗ್ ಆರೋಪಕ್ಕೆ ತಿರುಗೇಟು ನೀಡಿರುವ ಕುಮಾರಸ್ವಾಮಿ,ಪೊಲೀಸ್ ಕಮಿಷನರ್ ಕಚೇರಿ ಅಕ್ಟೋಬರ್ 29ರಂದು ಪ್ರಕಟಣೆ ಹೊರಡಿಸಿ, ಲೈಂಗಿಕ ದೌರ್ಜನ್ಯದ ವಿಚಾರ ಕಟ್ಟುಕಥೆ, ಘಟನೆಯೇ ನಡೆದಿಲ್ಲ ಎಂದು ಹೇಳಿದೆ. ಎಫ್–ಎಸ್ಎಲ್ ವರದಿ ಬರುವ ಮುನ್ನವೇ ಘಟನೆ ನಡೆದಿಲ್ಲ ಎಂದು ಪೊಲೀಸರೇ ತೀರ್ಮಾನಿಸಿರುವುದು ಸಿದ್ದರಾಮಯ್ಯರನ್ನು ರಕ್ಷಿಸಿ ಸರ್ಕಾರ ಉಳಿಸಿಕೊಳ್ಳುವ ತಂತ್ರವಲ್ಲದೆ ಮತ್ತೇನು 2011ರ ಘಟನೆಯನ್ನು 2023ರಲ್ಲಿ ಶೂಟ್ ಮಾಡಲಾಗಿದೆ ಎನ್ನಲಾಗುತ್ತಿದೆ. ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಕೃಪಾ ಆಳ್ವಾ ಪಾತ್ರವೇನು ಕೇರಳದ ಹೆಣ್ಮಗಳು ಈ ಹಿಂದೆ ಮಾಡಿದ ಇ–ಮೇಲ್ ದೂರುಗಳು ಎಲ್ಲಿ ಹೋದವು? ಆ 14 ವರ್ಷದ ಹೆಣ್ಣು ಮಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ವಿಡಿಯೋದಲ್ಲಿರುವ ಮೂರನೇ ವ್ಯಕ್ತಿ ಯಾರು ಆತನ ಪಾತ್ರ ಏನು ಕೃಪಾ ಆಳ್ವಾರನ್ನು ವಿದೇಶಕ್ಕೆ ಕಳುಹಿಸಿದ್ದು ಯಾಕೆ ಈ ಮೂಲದ ತನಿಖೆ ಪೊಲೀಸರು ಏಕೆ ಮಾಡುತ್ತಿಲ್ಲ 2023 ರಲ್ಲಿ ವಿಡಿಯೋ ಹೊರ ಬರಲು ಕಾರಣ ಏನು ಎಂದು ಸಾಲು ಸಾಲು ಪ್ರಶ್ನೆಗಳನ್ನು ಮುಂದಿಟ್ಟರು.
ಆರೋಪಿ ರಿತೇಶ್ ಕುಮಾರ್ ನನ್ನ ಮನೆಯಲ್ಲಿದ್ದ, ಅಲ್ಲಿಯೇ ಮೊಬೈಲ್ ಎಕ್ಸ್‌ಚೇಂಜ್ ಮಾಡಿಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಪೊಲೀಸರು ಕೋರ್ಟ್‌ಗೆ ನೀಡಿರುವ ದಾಖಲೆಯಲ್ಲೇ ಆತನ ವಿಳಾಸ ಉತ್ತರ ಪ್ರದೇಶದ ಗಾಜಿಯಾಬಾದ್ ಎಂದಿದೆ. ಅಕ್ಟೋಬರ್ 23ರಂದು ಮಧ್ಯಾಹ್ನ 2:59ಕ್ಕೆ ಗಾ–ಜಿಯಾಬಾದ್‌ನ ಇಂದಿರಾಪುರಂನಲ್ಲಿ ಆತನನ್ನು ಬಂಧಿಸಲಾಗಿದೆ. ನನ್ನ ದೆಹಲಿ ನಿವಾಸದಲ್ಲಿ ಆತ ಇರಲೇ ಇಲ್ಲ. ಹೀಗಿರುವಾಗ ನನ್ನ ನಿವಾಸ ಮಹಜರು ಮಾಡಲಾಗಿದೆ ಎಂಬ ಸುದ್ದಿಗಳನ್ನು ಗೃಹ ಸಚಿವರು ಮತ್ತು ಕಮಿಷನರ್ ಕಟ್ಟುಕಥೆಯಾಗಿ ಸೃಷ್ಟಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.
ಕಟ್ಟುಕಥೆ ಅಂತ ತನಿಖಾ ವರದಿಯಲ್ಲೇ ತೀರ್ಮಾನವಾಗಿದೆ.ವಿಡಿಯೋ ಮಾಡಿಸಿದವ್ರ ರಕ್ಷಣೆಗಷ್ಟೇ ತನಿಖೆ ಆಗುತ್ತಿದೆ. ಗೃಹ ಸಚಿವರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ.ಇದು ಟ್ರೇಲರ್ ಅಂತ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ನನ್ನ ಜೀವನದಲ್ಲೇ ಟ್ರೇಲರ್ ಎಷ್ಟು ನೋಡಿಲ್ಲ ಹೇಳಿ ಎಂದು ತಿರುಗೇಟು ನೀಡಿದರು. ಸಿದ್ದರಾಮಯ್ಯಗೆ ಕ್ಲೀನ್ ಚಿಟ್ ನೀಡಲು ಪೊಲೀಸರು ತರಾತುರಿಯಲ್ಲಿ ತನ್ನ ಮೇಲೆ ಕಟ್ಟುಕಥೆ ಹೆಣೆಯುತ್ತಿದ್ದಾರೆ ಎಂದು ದಾಖಲೆ ಹಾಗೂ ಹಳೆಯ ವಿಡಿಯೋ ತುಣುಕುಗಳ ಸಮೇತ ಕಾಂಗ್ರೆಸ್ ಸರ್ಕಾರಕ್ಕೆ ತಿರುಗೇಟು ನೀಡಿದರು.

# ರಾಯಚೂರು ಜಿಲ್ಲೆ ಯಲ್ಲಿ ದಲಿತರ ಮೇಲಿನ ದೌರ್ಜನ್ಯ, ಅತ್ಯಾಚಾರ, ಕೊಲೆ ಪ್ರಕರಣಗಳಿಗೆ ಕಡಿವಾಣ ಹಾಕಲು ವಿಶೇಷ ಕಾನೂನು ರೂಪಿಸಿ

## ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಮಿತಿಯಿಂದ ಆಗ್ರಹ; ಮುಖ್ಯಮಂತ್ರಿ ಅವರಿಗೆ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ರಾಯಚೂರು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ದಲಿತರ ಮೇಲಿನ ದೌರ್ಜನ್ಯ, ಅತ್ಯಾಚಾರ, ಕೊಲೆ ಹಾಗೂ ಸಾಮಾಜಿ–ಕ ಬಹಿಷ್ಕಾರದಂತಹ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ವಿಶೇಷ ಕಾನೂನು ರೂಪಿಸಬೇಕು ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ.), ಮಹಾತ್ಮ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ರಾಜ್ಯ ಸಮಿತಿ ಆಗ್ರಹಿಸಿದೆ.**

ಈ ಕುರಿತು ಸಮಿತಿಯ ವತಿಯಿಂದ ಸೋಮವಾರ ದೇವದುರ್ಗ ತಾಲೂಕು ತಹಶೀಲ್ದಾರ್ ಅವರ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮನವಿ ಪತ್ರದಲ್ಲಿ ರಾಯಚೂರು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನಡೆದಿರುವ ಹಲವು ಘಟನೆಗಳನ್ನು ಉಲ್ಲೇಖಿಸಲಾಗಿದೆ. ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದಲ್ಲಿ ದಲಿತ ಯುವಕನನ್ನು ಮಾರಕಾಸ್ತ್ರಗಳಿಂದ ಹತ್ಯೆ ಮಾಡಲಾಗಿದ್ದು, ಪ್ರಕರಣದ ಪ್ರಮುಖ ಆರೋಪಿ ಭೀಮರಾಯ ಹದ್ದಿನಾಳ ಇದುವರೆಗೆ




ಬಂಧನವಾಗಿಲ್ಲ ಎಂದು ಸಮಿತಿ ಆರೋಪಿಸಿದೆ. ಸಿರವಾರ ತಾಲೂಕಿನ ಹೊಕ್ಕಾಣೆ ಗ್ರಾಮದಲ್ಲಿ 21 ವರ್ಷದ ಪದವೀಧರೆ ದಲಿತ ಯುವತಿ ಅಶ್ವಿನಿ ಅವರನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ ಮಾಡಿ ಬಾವಿಗೆ ಎಸೆಯಲಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಲಿಂಗಸೂರು ತಾಲೂಕಿನ ಕರಡಕಲ್ ಗ್ರಾಮದ ರಾಣಮ್ಮ ಅವರ ಮೇಲೆ ಆಗಸ್ಟ್ 19ರಂದು ಲೈಂಗಿಕ ದೌರ್ಜನ್ಯ ಎಸಗಿ ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.
ಇದೇ ರೀತಿ ಸಿಂಧನೂರು ತಾಲೂಕಿನ ತಿಡಿಗೋಳ ಗ್ರಾಮದಲ್ಲಿ ರಥೋತ್ಸವದ ಸಂದರ್ಭದಲ್ಲಿ ಜಾತಿ ತಾರತಮ್ಯದ ಹಿನ್ನೆಲೆಯಲ್ಲಿ ದಲಿತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಗಾಯಗೊಂಡ ಸಂತ್ರಸ್ತರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಮಿತಿ ತಿಳಿಸಿದೆ. ಲಿಂಗಸೂರು ತಾಲೂಕಿನ ಈಚನಾಳ ಗ್ರಾಮದಲ್ಲಿ ದಲಿತ ಗ್ರಾಹಕರಿಗೆ ಪ್ರತ್ಯೇಕ ಗ್ಲಾಸ್‌ಗಳಲ್ಲಿ ನೀರು ನೀಡದೆ, ದೂರದಿಂದಲೇ ಮೇಲಿನಿಂದ ನೀರು ಸು–ರಿಯುವ ಮೂಲಕ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನೂ ಸಮಿತಿ ಮಾಡಿದೆ.
ಸಮಿತಿಯ ಪ್ರಮುಖ ಆಗ್ರಹಗಳು: ರಾಯಚೂರು ಜಿಲ್ಲೆಯಲ್ಲಿ ದಲಿತರ ಮೇಲೆ ನಡೆದಿರುವ ಹಲ್ಲೆ, ಅತ್ಯಾಚಾರ, ಕೊಲೆ ಹಾಗೂ ಸಾಮಾಜಿಕ ಬಹಿಷ್ಕಾರದ ಪ್ರಕರಣಗಳನ್ನು ತ್ವರಿತವಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾ–ರಿಗೊಳಿಸಬೇಕು. ಅಸ್ಪೃಶ್ಯತೆ ಆಚರಣೆಗೆ ಅವಕಾಶ ನೀಡುವ ಹಾಗೂ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.
ಅಲ್ಲದೆ, ಭೂಮಾನಂದ ಕೊಲೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಬೇಕು. ತ್ವರಿತ ನ್ಯಾಯಾಲಯದ ಮೂಲಕ ವಿಚಾರಣೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸಬೇಕು ಎಂದು ಮನವಿ ಮಾಡಲಾಗಿದೆ. ಭಾರತ ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತೆಯನ್ನು ನಿಷೇಧಿಸಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಆಚರಣೆಗಳು ಮುಂದುವ–ರಿಯುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಶಾಶ್ವತ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಮಿತಿ ಆಗ್ರಹಿಸಿದೆ.
ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಸಂಚಾಲಕ ಶಿವಪ್ಪ ಪಲಕನಮರಡಿ, ದೇವದುರ್ಗ ತಾಲೂಕು ಸಂಚಾಲಕ ರಮೇಶ್ ಭಾವಿಮನಿ, ಅರಕೇರಾ ತಾಲೂಕು ಸಂಚಾಲಕ ರಾಮಪ್ಪ ಮೇಸ್ತ್ರಿ, ತಾಲೂಕು ಸಂಘಟನಾ ಸಂಚಾಲಕರಾದ ಈಶಪ್ಪ ಶಿವಂಗಿ, ಡೇವಿಡ್ ಮಸರಕಲ್, ರಂಗಪ್ಪ ತೊಗರಿ, ಸಿದ್ದಪ್ಪ ಜನಕಲ್ ಪಾಲಕನಮರಡಿ, ರಮೇಶ್ ಭೋವಿ ಗೆಜ್ಜೆಬಾವಿ, ದುರುಗೇಶ್, ವಿರೇಶ್ ಬೆರಿ, ರಮೇಶ್ ಹಿರೇಬುದುರ್, ಅದಪ್ಪ ಮ್ಯಾ ಕಲದೊಡ್ಡಿ, ಸಿದ್ದಪ್ಪ ಬೂದಿನಾಳ್, ಸಂಗಮೇಶ ಲಿಂಗದಹಳ್ಳಿ, ಗಫೂರ್ ಗೌರಪೇಟೆ, ರಮೇಶ್ ಹೆದ್ದಾರಿ, ಮೌನೇಶ್ ಕಕ್ಕಲದೊಡ್ಡಿ, ಮೌನೇಶ್ ಗಾಂಧಿ, ರಾಜು ತವಗ ಸೇರಿದಂತೆ ನೂರಾರು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಭಾಗವಹಿಸಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101